ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 35 | ಆಗಸ್ಟ್ 26, 1984 | ಬೆಲೆ 60 ಪೈಸೆ.

ಪ್ರಜಾಪ್ರಭುತ್ವದ ಕಗ್ಗೊಲೆ ನಿಲ್ಲಲಿ

ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಎಚ್.ಎಂ.ಎಸ್., ಎಚ್.ಎಂ.ಕೆ.ಪಿ., ಬಿ.ಎಂ.ಎಸ್., ಗಳ ಸಂಯುಕ್ತ ಪತ್ರಿಕಾ ಹೇಳಿಕೆ

ಒಂದರ ನಂತರ ಒಂದರಂತೆ ವಿರೋಧ ಪಕ್ಷಗಳ ಚುನಾಯಿತ ಸರ್ಕಾರಗಳನ್ನು ತನ್ನ ಮಿತಿಮೀರಿದ ಅಧಿಕಾರ ದಾಹಕ್ಕೆ ಬಲಿಕೊಡುತ್ತಾ ಹೊರಟಿರುವ ಶ್ರೀಮತಿ ಇಂದಿರಾಗಾಂಧಿಯವರು ಇತ್ತೀಚೆಗೆ ಜಮ್ಮು-ಕಾಶ್ಮೀರದ ನಂತರ ಆಂಧ್ರ ಪ್ರದೇಶ ಸರ್ಕಾರವನ್ನು ರಾಜ್ಯಪಾಲರುಗಳ ಮೂಲಕ ಉರುಳಿಸಿರುವುದು ಹಾಡು ಹಗಲಿನಲ್ಲೇ ಎಲ್ಲರ ಕಣ್ಮುಂದೆ ಪ್ರಜಾ ಪ್ರಭುತ್ವದ ಮೇಲೆ ಎಸಗಿದ ಅತ್ಯಾಚಾರವಾಗಿದೆ. ಇದೇ ದೇಶದ ಪ್ರಜಾ ಪ್ರಭುತ್ವ ಪ್ರೇಮಿ ಜನರಲ್ಲಿ ಭಯ, ಆತಂಕಗಳನ್ನು ಮೂಡಿಸಿದೆ. ಎಲ್ಲಾ ವಿರೋಧ ಪಕ್ಷಗಳು ಒಕ್ಕೊರಲ ಧ್ವನಿಯೆತ್ತಿವೆ. 'ಪ್ರಜಾ ಪ್ರಭುತ್ವದ ಕಗ್ಗೊಲೆ ನಿಲ್ಲಲಿ' ಎಂದು.

1957 ರಲ್ಲಿ ಕೇರಳದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಪ್ರಥಮ ಕಾಂಗ್ರೆಸ್ಸೇತರ ಸರ್ಕಾರವನ್ನು ವಿಮೋಚನಾ ಚಳುವಳಿಯ ಹೆಸರಿನಲ್ಲಿ 1959 ರ ಜುಲೈ 31 ರಂದು ಉರುಳಿಸಿದಂದಿನಿಂದ ಇಂದಿನವರೆಗಿನ 25 ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕಿ ಶ್ರೀಮತಿ ಇಂದಿರಾ ಗಾಂಧಿ ವಿರೋಧ ಪಕ್ಷಗಳ ಅನೇಕ ಸರ್ಕಾರಗಳ ಮೇಲೆ ಗದಾ ಪ್ರಹಾರ ಮಾಡಿದ್ದಾರೆ. ಮತ್ತು ಈ ಸರ್ಕಾರಗಳನ್ನು ಉರುಳಿಸುವ ತಂತ್ರದಲ್ಲಿ ಪರಿಣತಿ ಪಡೆದಿದ್ದಾರೆ. 1967 ರಲ್ಲಿ ರಚಿತವಾದ ವಿರೋಧ ಪಕ್ಷಗಳ ಸಂಯುಕ್ತ ರಂಗ ಸರ್ಕಾರಗಳನ್ನು ಇತ್ತೀಚೆಗೆ ತನ್ನ ಪಕ್ಷದವರು ಬೇರೆ ಪಕ್ಷದವರು ಎಂಬ ಬೇಧವಿಲ್ಲದೆ ತನಗೆ ಒಲ್ಲದವರನ್ನೆಲ್ಲಾ ಉರುಳಿಸುತ್ತಿರುವುದು ಪ್ರಜಾ ಸತ್ತೆಯ ಮೂಲಕ್ಕೆ ಕೊಡಲಿ ಪೆಟ್ಟಾಗಿದೆ. ಸಿಕ್ಕಿಂ ಜಮ್ಮು, ಕಾಶ್ಮೀರ, ಆಂಧ್ರ ಪ್ರದೇಶದ ನಂತರ ಕರ್ನಾಟಕದ ಮೇಲೆ ಗಮನ ಕೇಂದ್ರೀಕರಿಸಿದಂತೆ ಕಾಣುತ್ತದೆ. ಜನತಾ ಸರ್ಕಾರಕ್ಕೆ ಜನತೆಯ ಅಭಿಮತಕ್ಕೆ ಪೆಟ್ಟು ಕೊಡಲು ವಿಧಾನಸಭಾ ಚುನಾವಣೆಯಾದ ಕೆಲವೇ ದಿನಗಳಲ್ಲಿ ಆರಂಭಿಸಿದ ಪ್ರಯತ್ನಗಳು ಹಲವಾರು ಬಾರಿ ಸೋತರೂ ಇನ್ನೂ ನಿಂತಿಲ್ಲ. ಬದಲಾಗಿ ತೀವ್ರವಾಗುವ ಸೂಚನೆಗಳಿವೆ.

ಮೊದ ಮೊದಲು ಜಾತೀಯ, ಮತೀಯ ಭಾವನೆಗಳನ್ನು ಕೆರಳಿಸಿ ಜನರ ಬೆಂಬಲ ಪಡೆಯುವ ಪ್ರಯತ್ನ ಮಾಡುತ್ತಿದ್ದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ತನ್ನ ಪಕ್ಷದ 37 ವರ್ಷಗಳ ದುರಾಡಳಿತದ ಪರಿಣಾಮವಾಗಿ ಜನರ ಬಳಿ ಹೋಗುವ ಮುಖವಿಲ್ಲದಾಗಿದೆ. ಕೇವಲ ಕೈಗೊಂಬೆ ರಾಜ್ಯಪಾಲರು, ಹಣದ ಥೈಲಿಗಳೇ ಅವರ ಆಸರೆಯಾಗಿದೆ. ಜನಪ್ರಿಯ ಸರ್ಕಾರಗಳನ್ನುರುಳಿಸಿದ ನಂತರ ಕಪ್ಪೂರ್ಯಗಳೇ ಅವರ ಆಡಳಿತದ ಸಾಧನವಾಗಿದೆ. ಜಮ್ಮು-ಕಾಶ್ಮೀರ ಮತ್ತು ಇತರೆಡೆಗಳಲ್ಲಿ ನಾಗರಿಕ ಆಡಳಿತ ಯಂತ್ರವನ್ನು ಬದಿಗೊತ್ತಿ ಪ್ಯಾರಾ ಮಿಲಿಟರಿ ಮತ್ತು ಮಿಲಿಟರಿ ಮೂಲಕ ಆಡಳಿತ ನಡೆಸಲು ಮಾಡುತ್ತಿರುವ ಪ್ರಯತ್ನ ಸರ್ವಾಧಿಕಾರಿ ಪ್ರವೃತ್ತಿ ನಮ್ಮ ದೇಶದಲ್ಲಿ ಮತ್ತೆ ಹೆಡೆ ಎತ್ತುತ್ತಿರುವುದರ ಹಾಗೂ ಸಮಸ್ತ ಜನಜೀವನವನ್ನೇ ತನ್ನ ಹಿಡಿತಕ್ಕೊಳಪಡಿಸುವ ಸೂಚನೆಯಾಗಿದೆ. ಲೋಕಸಭಾ ಚುನಾವಣೆಗಳಲ್ಲಿ ಜನರು ತನ್ನನ್ನು ಕಿತ್ತೊಗೆಯುವ ಸಾಧ್ಯತೆಗಳಿಗಂಜಿ ಆಡಳಿತ ಯಂತ್ರದ ಮೂಲಕ ಮತಪೆಟ್ಟಿಗೆಯ ಮತಗಳನ್ನೇ ಬದಲಾಯಿಸುವ ಪ್ರಯತ್ನ ಜನಮತವನ್ನು ಬುಡಮೇಲು ಮಾಡುವ ಪ್ರಯತ್ನದ ಸೂಚನೆಯಾಗಿದೆ.

ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳ ನಿಗೂಢ ಕುತಂತ್ರ ವಿಚ್ಛಿದ್ರಕಾರಿ ಜಾತೀಯ ಧರ್ಮಾಂಧ, ಭಾಷಾಂಧ ಶಕ್ತಿಗಳು, ವಿಜೃಂಭಿಸುತ್ತಿರುವ ಈ ವೇಳೆಯಲ್ಲಿಯೇ ನಡೆಯುತ್ತಿರುವ ಈ ಕಗ್ಗೊಲೆಗಳು ದೇಶವನ್ನು

(8ನೇ ಪುಟ ನೋಡಿ)

ಆಗಸ್ಟ್ 25 ರಂದು ದೇಶಾದ್ಯಂತ ಪ್ರತಿಭಟನೆ

ಶಾಸನ ಸಭೆಯಲ್ಲಿ ಬಹುಮತ ಹೊಂದಿರುವ ಎನ್. ಟಿ. ರಾಮರಾವ್ ಸಂಪುಟವನ್ನು ರಾಜಕೀಯ ದುರುದ್ದೇಶದಿಂದ ಸಂವಿಧಾನಕ್ಕೆ ವಿರೋಧವಾಗಿ ವಜಾ ಮಾಡಿರುವುದನ್ನು ಖಂಡಿಸಲು ದೇಶದ ಎಲ್ಲ ವಿರೋಧ ಪಕ್ಷಗಳು ಇದೇ ತಿಂಗಳು 25 ರಂದು ದೇಶಾದ್ಯಂತ ಮತ ಪ್ರದರ್ಶನ, ಬಹಿರಂಗ ಸಭೆಗಳ ಮೂಲಕ ಚಳುವಳಿ ಪ್ರಾರಂಭಿಸಲು ಕರೆ ಕೊಟ್ಟಿವೆ. ದಿಲ್ಲಿಯಲ್ಲಿ ಚರಣ್ ಸಿಂಗರ ಅಧ್ಯಕ್ಷತೆಯಲ್ಲಿ ಸೇರಿದ್ದ ವಿರೋಧ ಪಕ್ಷಗಳ ಸಭೆಯಲ್ಲಿ ಆಂಧ್ರದ ರಾಜ್ಯಪಾಲ ರಾಮ ಲಾಲ್ ಅವರನ್ನೂ, ಭಾಸ್ಕರ ರಾವ್ ಮಂತ್ರಿ ಮಂಡಲವನ್ನು ಕೂಡಲೇ ಕಿತ್ತೊಗೆದು ಎನ್.ಟಿ.ಆರ್. ಮಂತ್ರಿ ಮಂಡಲವನ್ನು ಮುಂದುವರಿಸಲು ಅವಕಾಶ ಮಾಡಿ ಕೊಡಬೇಕೆಂದೂ, ಹಾಗಾಗದಿದ್ದಲ್ಲಿ ದೇಶದ ಜನತೆ ಬಂಡೇಳುವ ಪರಿಸ್ಥಿತಿ ಉಂಟಾಗಬಹುದೆಂದೂ ಎಚ್ಚರಿಕೆ ನೀಡಿ ಪ್ರಜಾಪ್ರಭುತ್ವದ ಕೊಲೆಗೈಯುವ ಇಂದಿರಾ ಸರ್ಕಾರದ ನೀತಿಯನ್ನು ಖಂಡಿಸಲು ಸಾರ್ವತ್ರಿಕ ಮುಷ್ಕರದ ಕರೆ ಕೊಡಲಾಗಿದೆ. ಅಂಥ ಜನಾಭಿಪ್ರಾಯಕ್ಕೆ ಇಂದಿರಾ ಗಾಂಧಿ ಮಣಿಯದಿದ್ದರೆ ಕೆಲವೇ ದಿವಸಗಳಲ್ಲಿ "ಭಾರತ ಬಂದ್" ಆಚರಿಸುವ ನಿರ್ಧಾರವನ್ನು ಪ್ರಕಟಿಸಿದೆ.

ಆಗಸ್ಟ್ 25 ರ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಲಿ. ಪ್ರಜಾ ಪ್ರಭುತ್ವ ವಿರೋಧಿ ಶಕ್ತಿಗಳು ನಾಶವಾಗಲಿ.

ಜನತಂತ್ರದ ಮೇಲೆ ರಾಕ್ಷಸೀ ಆಕ್ರಮಣ

ಎನ್. ಟಿ. ಆರ್. ಸಂಪುಟದ ವಿಸರ್ಜನೆಯು ಸಂವಿಧಾನ ಮತ್ತು ಜನತೆಯ ಹಕ್ಕುಗಳ ಮೇಲೆ ನಡೆಸ ರಾಕ್ಷಸೀ ಆಕ್ರಮಣವೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಅಭಿಪ್ರಾಯ ವ್ಯಕ್ತ ಮಾಡಿದೆ. ಮುಂಬರುವ ಲೋಕ ಸಭೆಯ ಚುನಾವಣೆಯ ಮುಂಚೆ ಕಾಂಗ್ರೆಸ್ಸೇತರ ಸರ್ಕಾರಗಳನ್ನು ನಿರ್ಬಲಗೊಳಿಸುವ ಕಾರ್ಯದಲ್ಲಿ ಮಗ್ನರಾದ ಕೇಂದ್ರವನ್ನಾಳುತ್ತಿರುವ ಆಡಳಿತ ಪಕ್ಷದ ಏಜೆಂಟರಾಗಿ ಆಂಧ್ರ ರಾಜ್ಯಪಾಲರು ವರ್ತಿಸಿದ್ದಾರೆ. ಬಹುಸಂಖ್ಯಾತ ಶಾಸಕರ ಬೆಂಬಲ ಎನ್. ಟಿ. ಆರ್.ಗೆ ಇತ್ತು. ಅದನ್ನು ತೋರ್ಪಡಿಸಲು ಶಾಸನ ಸಭೆಯನ್ನು ಕರೆಯಬೇಕೆಂಬ ಬೇಡಿಕೆಯನ್ನು ಮುಂಡಿಸಿದ್ದರು. ಆದರೆ ಸಂವಿಧಾನದ ಔಚಿತ್ಯಕ್ಕಾಗಲೀ ಪ್ರಜಾಪ್ರಭುತ್ವ ನೀತಿ ನಿಯಮಗಳಿಗಾಗಲಿ ರಾಜ್ಯಪಾಲರು ಯಾವುದೇ ಮರ್ಯಾದೆ ತೋರಿಸಲಿಲ್ಲ. ಎಂಥ ಪರಿಸ್ಥಿತಿಯಲ್ಲೂ ತನ್ನ ಸರ್ವಾಧಿಕಾರವನ್ನು ಮುಂದುವರಿಸುವ ದೃಢ ನಿರ್ಧಾರವನ್ನು ಎನ್. ಟಿ. ಆರ್. ಮಂತ್ರಿ ಮಂಡಲವನ್ನು ಕಿತ್ತೊಗೆಯುವ ಮೂಲಕ ತೋರಿಸಿ ಕೊಟ್ಟಿದ್ದಾರೆ. ಅಲ್ಪ ಬಹುಮತದ ಹೊಸ ಮಂತ್ರಿ ಮಂಡಲ ಪ್ರತಿಜ್ಞಾವಿಧಿ ಸ್ವೀಕರಿಸಿರುವುದರಿಂದಲೇ ಸಮಾಧಾನ ಹೊಂದದೆ ಮಾಜಿ ಮುಖ್ಯ ಮಂತ್ರಿ, ಇತರ ಮಂತ್ರಿಗಳು, ಸಿ.ಪಿ.ಐ.(ಎಂ) ಹಾಗೂ ಇತರ ಪಕ್ಷಗಳ ಮುಖಂಡರುಗಳನ್ನೊಳಗೊಂಡ ನೂರಕ್ಕೂ ಹೆಚ್ಚು ಜನರನ್ನು ಬಂಧಿಸಿದ್ದರು.

ಮಂತ್ರಿ ಮಂಡಲದ ವಿಸರ್ಜನೆಯ ವಿರುದ್ಧ, ಎಲ್ಲ ಪಕ್ಷಗಳೂ, ಜನತೆಯೂ ಸಾಮೂಹಿಕ ಮತ ಪ್ರದರ್ಶನಗಳ ಮೂಲಕ ಪ್ರತಿಭಟನೆ ವ್ಯಕ್ತ ಮಾಡಬೇಕೆಂದು ಸಿ. ಪಿ. ಐ (ಎಂ) ಕರೆ ಕೊಡುತ್ತದೆ.

ಸರ್ವಾಧಿಕಾರವನ್ನು ಕಿತ್ತೊಗೆಯಿರಿ

ಆಂಧ್ರದ ಎನ್. ಟಿ. ರಾಮರಾವ್ ಸರ್ಕಾರವನ್ನು ಅನ್ಯಾಯದಿಂದ ವಿಸರ್ಜಿಸಿ ಭಾಸ್ಕರ ರಾವ್ ಸರ್ಕಾರ ರಚಿಸಲು ಅವಕಾಶ ಮಾಡಿ ಕೊಟ್ಟ ಇಂದಿರಾ ಸರ್ಕಾರದ ಕ್ರೂರ ವರ್ತನೆಯನ್ನು ಪ್ರತಿಭಟಿಸಲು ಆಂಧ್ರದ ಆರು ಕೋಟಿ ಜನರಷ್ಟೇ ಅಲ್ಲ ಇಡೀ ದೇಶದ ಜನರ ಪ್ರತಿರೋಧ ಕೋಡಿಯಾಗಿ ಹರಿಯುತ್ತಿದೆ. ತಾನು ಮಾಡಿದ್ದೆಲ್ಲ ಸತ್ಯವೆಂದು ಹೇಳುವ ಡಂಬದ ಕೋಳಿಯ ವಿರುದ್ಧ ರೊಚ್ಚಿಗೆದ್ದ ಜನತೆ ಅದರ ಹೊಟ್ಟೆ ಹರಿಯುವ ರೀತಿಯಲ್ಲಿ ಹೋರಾಟ ನಡೆಸಿದ್ದಾರೆ. ಪ್ರಜಾಪ್ರಭುತ್ವದ ರಕ್ಷಣೆಗಾಗಿ ಇಂದಿರಾ ನೀತಿಯ ವಿರುದ್ಧ ನಡೆದಿರುವ ಜನತೆಯ ಚಳುವಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಂಪೂರ್ಣ ಬೆಂಬಲ ನೀಡುತ್ತದೆ. ಅದು ಯಶಸ್ವಿಯಾಗಿ ಸರ್ವಾಧಿಕಾರಿ ಶಕ್ತಿ ನಾಶವಾಗಲಿ, ಪ್ರಜಾ ಪ್ರಭುತ್ವ ಪತಾಕೆ ಎತ್ತರದಲ್ಲಿ ಹಾರಲೆಂದು ಹಾರೈಸುತ್ತದೆ.

ಎನ್. ಟಿ. ಆರ್. ಬೆಂಬಲಿಗರೂ ವಿರೋಧ ಪಕ್ಷಗಳ ಮುಖಂಡರೂ ರಾಷ್ಟ್ರಾಧ್ಯಕ್ಷ ಜೇಲ್ ಸಿಂಗ್ ಅವರನ್ನು ಭೇಟಿ ಮಾಡಿದಾಗ ಅವರು ಇಡೀ ದೇಶದ ರಕ್ಷಣೆಗಾಗಿ ತಾವು ವಹಿಸಿಕೊಳ್ಳಬೇಕಾದ ಜವಾಬ್ದಾರಿಯನ್ನು ಬದಿಗೊತ್ತಿದರು. ಆಂಧ್ರದ ರಾಜ್ಯಪಾಲ ರಾಮಲಾಲ್ ಅವರು ತಮಗೆ ನಿಜ ಸಂಗತಿ ತಿಳಿಸಲಿಲ್ಲವೆಂಬುದನ್ನು ಒಪ್ಪಿಕೊಂಡರೂ ಆಂಧ್ರ ಹಾಗೆಯೇ ಮತ್ತಿನ್ನಿತರ ಪ್ರದೇಶಗಳಲ್ಲಿ ನಡೆದಿರುವ ಉಗ್ರ ಪ್ರತಿಭಟನೆಗೆ ಓಗೊಟ್ಟು ಆಂಧ್ರದ ರಾಜ್ಯಪಾಲರಿಂದಲೇ ತಪ್ಪಾಗಿದೆಂಬ ಸಮನದಟ್ಟಾಗಿದ್ದರೂ ಸಮಸ್ಯೆ ಪರಿಹಾರಕ್ಕೆ ಧಾವಿಸಲು ನಿರಾಕರಿಸುತ್ತಿರುವುದು ಅತ್ಯಂತ ನಾಚಿಕೆಗೇಡಿ ವರ್ತನೆಯೇ ಸರಿ.

ರಾಜ್ಯಪಾಲರ ನಿರ್ಣಯ ತನಗಾಗಲೀ ಕೇಂದ್ರಕ್ಕಾಗಲೀ, ತನ್ನ ಪಕ್ಷಕ್ಕಾಗಲೀ ಯಾವುದೇ ಸಂಬಂಧವಿಲ್ಲವೆಂದೂ ಯಾವ ಹಂತದಲ್ಲಾಗಲೀ ಅವರು ತಮ್ಮ ಜೊತೆಯಲ್ಲಿ ಸಲಹೆ ಕೇಳಲಿಲ್ಲವೆಂದೂ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಲೋಕ ಸಭೆಯಲ್ಲಿ ಹೇಳಿದರು. ಒಂದು ಪಕ್ಷದ ಬಹುಮತವನ್ನು ಶಾಸನ ಸಭೆಯಲ್ಲೇ ನಿರ್ಧರಿಸಬೇಕೆಂದೂ ಅಭಿಪ್ರಾಯ ವ್ಯಕ್ತ ಮಾಡಿದರು. ಆದರೆ ಮೂರೇ ದಿವಸಗಳಲ್ಲಿ ಶಾಸನ ಸಭೆ ಕರೆದು ಯಾರಿಗೆ ಬಹುಮತ ಇದೆಂಬುದನ್ನು

(8ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

ಈ ದೇಶದ ಕಾಂಗ್ರೆಸ್ನ ಕುಟಿಲ ತಂತ್ರಗಳು

— ಎನ್ಕೆ

ಆಗಸ್ಟ್ 15 ರೊಳಗಾಗಿ ಹೆಗಡೆ ಸರಕಾರವನ್ನುರುಳಿಸುವ ಪಣ ತೊಟ್ಟಿದ್ದ ರಾಜ್ಯದ ಕಾಂಗ್ರೆಸ್ ಮುಖಂಡರ ಆಟ ವಿಫಲವಾಗಿದೆ. 1983 ರಲ್ಲೂ ಇಂಥ ಹಲವಾರು ಪಣ ತೊಡಲಾಗಿತ್ತು. ಮತದಾರರಿಂದ ಬೆಳೆದು ಬರುತ್ತಿರುವ ಜಾಗೃತ ಚಳವಳಿ ಶಾಸಕರಲ್ಲಿ ಭೀತಿ ಉಂಟುಮಾಡಿ ಪಕ್ಷಾಂತರವನ್ನು ತಡೆದು ಮೋಯಲಿ ಬಳಗದ ಕನಸನ್ನು ನನಸು ಗೊಳಿಸಲು ಅಡ್ಡ ಕಲ್ಲಾಗಿ ನಿಂತಿತು. ಆಗಸ್ಟ್ 16 ರಂದು ಆಂಧ್ರದಲ್ಲಿ ಎನ್. ಟಿ. ರಾಮರಾಯರ ಸರಕಾರವನ್ನು ಉರುಳಿಸಿ ಪಕ್ಷಾಂತರಿ ಭಾಸ್ಕರರಾವ್‌ಗೆ ಮಂತ್ರಿ ಮಂಡಲ ರಚಿಸಲು ಅವಕಾಶ ಮಾಡಿ ಕೊಟ್ಟ ಅಲ್ಲಿಯ ಗವರ್ನರರ ಕೃತಿಯಿಂದ ಪ್ರಚೋದಿತರಾಗಿ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಕೆ. ಎಚ್. ಪಾಟೀಲ, ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಮೊದಲಾದವರು ಮದ್ರಾಸಿಗೆ ಧಾವಿಸಿ, ಕೇರಳ ಮುಖ್ಯಮಂತ್ರಿ, ಕರುಣಾಕರನ್ ಜೊತೆಯಲ್ಲಿ ಸಮಾಲೋಚನೆ ನಡೆಸಿದರಂತೆ. ಆಂಧ್ರದ ಭಾಸ್ಕರರಾವ್‌ರ ಪಾತ್ರವನ್ನು ಕರ್ನಾಟಕದಲ್ಲಿ ಕೆ. ಎಚ್. ಪಾಟೀಲರು ವಹಿಸಿಕೊಳ್ಳಬಹುದೇ ಎಂಬ ವಿಷಯ ಗಂಭೀರವಾಗಿ ಚರ್ಚೆಯಾಯಿತಂತೆ. ಆದರೆ ಅವರ ಗುಂಡು ಗುರಿತಪ್ಪಿದ್ದರಿಂದ ಖಾಲಿ ಕೈಯಲ್ಲೇ ವಾಪಸಾದರು. ಬಂಗಾರಪ್ಪನವರಿಗೂ ದಿಲ್ಲಿ ಅಮ್ಮಾವ್ರಿಂದ ಅವಸರದ ಕರೆ ಬಂದಿತ್ತು. ಅವರೂ ಅಷ್ಟೇ ಅವಸರದಲ್ಲಿ ದಿಲ್ಲಿ ದರ್ಶನ ಕೊಟ್ಟು ಪ್ರಸಾದ ಸ್ವೀಕರಿಸಿ ವಾಪಸ್ಸಾದರು. ಇವರೆಲ್ಲರ ಶ್ರಮಕ್ಕೆ ಫಲ ಸಿಗಲಿಲ್ಲ. ಯಾಕೆಂದರೆ ಬಂಡವಾಳ ಶಾಹಿ ಪದ್ಧತಿಯಲ್ಲಿಯೇ ರಾಮಕೃಷ್ಣ ಹೆಗಡೆಯವರು ಆಟ ಹೂಡಿದರು, ಮಂತ್ರಿ ಮಂಡಳ ವಿಸ್ತರಿಸಿದರು. ಖಾತೆ ಬದಲಾಯಿಸಿದರು. ಛೇರ್‌ಮನ್ ಶಿಪ್ ಕೊಟ್ಟರು, ಹೀಗೆ 90 ಜನತಾ ಸದಸ್ಯರಿಗೆಲ್ಲ ಸಮಾಧಾನ ಉಂಟುಮಾಡುವ ಸಿಹಿ ತಿಂಡಿ ಹಂಚಿ ಆಂಧ್ರದ ಬಿಸಿಗಾಳಿ ಕರ್ನಾಟಕಕ್ಕೆ ಹಬ್ಬದಂತೆ ಮಾಡಿದರು.

ದೇವೇಗೌಡರನ್ನು ಮಂತ್ರಿ ಮಂಡಲದಿಂದ ಕಡಿಮೆ ಮಾಡಿದ್ದರಿಂದ ಕಾಂಗ್ರೆಸ್ನ ಶ್ರೀಕಂಠಯ್ಯ ಗುಂಪಿಗೆ ಸಮಾಧಾನವಾಗಿದೆಯಂತೆ. ಇದು ಹೆಗಡೆ ಸರಕಾರವನ್ನು ಭದ್ರಗೊಳಿಸಲು ಸಹಾಯವಾಗಬಹುದು.

ಕರ್ನಾಟಕದ ಜನತಾ ಸರಕಾರದ ಚಟುವಟಿಕೆಗಳು ಕಾಂಗ್ರೆಸ್ ಹಾದಿಯಲ್ಲೇ ಮುಂದುವರಿದಿದೆ. ತಮ್ಮ ಪಕ್ಷದಲ್ಲಿ ಬಂಡೆದ್ದಾಗ ಯಾವ ರೀತಿ ಬೇರೆ-ಬೇರೆ ಗುಂಪುಗಳನ್ನು ಸಮಾಧಾನಗೊಳಿಸಲು ಮಂತ್ರಿ ಮಂಡಲ ವಿಸ್ತರಿಸಲಾಗುತ್ತಿತ್ತೋ, ಅದೇ ರೀತಿಯಲ್ಲಿ ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ "ಮಂತ್ರಿ ಮಂಡಲದ" ವಿಸ್ತರಣೆಯ ಕೂಗು ಕೇಳುತ್ತ ಬಂದಿದ್ದು ಆಗಸ್ಟ 16 ರಂದು ಅದು ಕೊನೆಗೊಂಡಿದೆ. ಕಾಂಗ್ರೆಸ್ಸಿನವರು ಹೇಳುತ್ತಿದ್ದಂತೆಯೇ ಕೆಲವು ಹಿರಿಯ ಮಂತ್ರಿಗಳನ್ನು ಕೈಬಿಡಲಾಗುವುದೆಂಬ ದಟ್ಟವಾರ್ತೆಯಲ್ಲಿ ಬೊಮ್ಮಾಯಿ-ದೇವೇಗೌಡರು ಸಿಕ್ಕಿಕೊಂಡಿದ್ದು ಕೊನೆಯಲ್ಲಿ ಬೊಮ್ಮಾಯಿ ಉಳಿಯುವಂತಾಯಿತು. ಆದರೆ ಕ್ಯಾಬಿನೆಟ್ ಮಂತ್ರಿಯಾಗಿ ಹುಬ್ಬಳ್ಳಿಯ ಮುಜಾಹಿದ್ ಅವರ ಹೆಸರು ಸೂಚಿಸಿ ತಮ್ಮ ಹಾಗೂ ಜನತಾ ಪಕ್ಷದ ಹೆಸರಿಗೆ ಕಳಂಕವನ್ನುಂಟು ಮಾಡಿದರು.

ಪಶ್ಚಿಮ ಬಂಗಾಲ-ತ್ರಿಪುರಾಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡತ್ವದ ಎಡರಂಗ ಸರಕಾರದಲ್ಲಿ ಗುಂಪುಗಾರಿಕೆಯ ಸಮಸ್ಯೆಯಾಗಲೀ ಮಂತ್ರಿಮಂಡಲದ ವಿಸ್ತರಣೆಯ ಪ್ರಶ್ನೆಯಾಗಲೀ ಉಂಟಾಗುತ್ತಿಲ್ಲ. ಯಾಕೆಂದರೆ ಕಮ್ಯುನಿಸ್ಟ್ ಪಾರ್ಟಿಗಳಲ್ಲಾಗಲೀ ಇತರ ಎಡ ಪಕ್ಷಗಳಲ್ಲಾಗಲೀ ವ್ಯಕ್ತಿಗೆ ಅಧಿಕಾರ ಕೊಡುವ ಪ್ರಶ್ನೆ ಮಹತ್ವದ್ದಲ್ಲ. ಪಕ್ಷ ತನ್ನ ಚುನಾವಣಾ ಘೋಷಣೆಯನ್ನು ಕಾರ್ಯ ರೂಪದಲ್ಲಿ ತರುವುದೇ ಮುಖ್ಯವಾಗಿರುತ್ತದೆ. ಮಂತ್ರಿಗಳನ್ನು ಆರಿಸುವ ಜವಾಬ್ದಾರಿ ಪಕ್ಷದ್ದಾಗಿರಬೇಕಲ್ಲದೆ, ಮುಖ್ಯಮಂತ್ರಿಯವರದ್ದಲ್ಲ. ಶಾಸಕರು ಪಕ್ಷದ ಶಿಸ್ತಿಗೆ ನಿಷ್ಠಾವಂತರಾಗಿರಬೇಕಲ್ಲದೆ ಅಧಿಕಾರಕ್ಕಲ್ಲ.

ಜನತಾ ಪಕ್ಷ ಸಿಪಿಐ (ಎಂ) ನಂತೆಯಲ್ಲ. ಅದೊಂದು ಬಂಡವಾಳಶಾಹಿ ರಾಜಕೀಯ ಪಕ್ಷ. ಅದರಲ್ಲಿ ಪಕ್ಷದ ಶಿಸ್ತಿಗಿಂತಲೂ ಅಧಿಕಾರ ವ್ಯಾಮೋಹ ಜಾಸ್ತಿ. ಜಾತೀಯತೆಗೆ ಪ್ರಾಧಾನ್ಯತೆ. ತಮ್ಮ ಜಾತಿ, ಗುಂಪುಗಳಿಗೆ ಪ್ರಾಧಾನ್ಯತೆ ಸಿಗಬೇಕೆಂದು ಒತ್ತಾಯ ಮಾಡುವವರೇ ಹೆಚ್ಚು. ಆದ್ದರಿಂದ ಪ. ಬಂಗಾಲ, ತ್ರಿಪುರಾಗಳಲ್ಲಿ ಮಂತ್ರಿ ಮಂಡಲ ವಿಸ್ತರಣೆಯ ಪ್ರಶ್ನೆ ಉಂಟಾಗುತ್ತಿಲ್ಲ, ಜನತಾದಲ್ಲಿ ಕಾಂಗ್ರೆಸ್ಸಿನಂತೆಯೇ ಮಂತ್ರಿಮಂಡಲದ ವಿಸ್ತರಣೆಯೇ ಹೆಗಡೆ ಸರಕಾರದ ಅಳಿವು-ಉಳಿವಿಗೆ ಕಾರಣವಾಗಿತ್ತು. ಸದ್ಯಕ್ಕೆ ಅದಕ್ಕೆ ಪೂರ್ಣ ವಿರಾಮ ಬಿದ್ದಂತಾಗಿದೆ.

ಜನತಾ ಪಕ್ಷ ಚುನಾವಣೆಯ ಘೋಷಣೆಯಲ್ಲಿತ್ತ ಆಶ್ವಾಸನೆಯನ್ನು ಪೂರೈಸಲು 19 ತಿಂಗಳು ಹಿಡಿಯಿತು. ಸರಕಾರಿ ನೌಕರದಾರರ ನಿವೃತ್ತಿ ವಯಸ್ಸನ್ನು 55 ರಿಂದ 58 ಕ್ಕೆ ಏರಿಸುವ ವಾಗ್ದಾನ ಈಗ ಪೂರೈಸಿದಂತಾಗಿದೆ. ಆದರೆ ಆರ್ಥಿಕ ನೆರವು ಪಡೆಯುವ ನಗರಸಭೆ, ವಿದ್ಯಾ ಖಾತೆ ಮೊದಲಾದ ಕಚೇರಿಗಳಲ್ಲಿ ದುಡಿಯುತ್ತಿರುವ ನೌಕರರಿಗೂ ಈ ಸೌಲಭ್ಯ ಸಿಗಬೇಕು. ★

4-9-84 ರಂದು ರಾಜ್ಯ ಸರಕಾರಿ ನೌಕರದಾರರ ಅಖಿಲ ಭಾರತ ಮುಷ್ಕರ

ಕೇಂದ್ರ ಸರ್ಕಾರದ ಆರ್ಥಿಕ ಧೋರಣೆಯಲ್ಲಿ, ಮೂಲಭೂತ ಬದಲಾವಣೆಯ ಮೂಲಕ ಬೆಲೆ ಹೆಚ್ಚಳದ ಪರಿಣಾಮಕಾರಿ ಹಿಡಿತ ಮತ್ತು ಸಾರ್ವಜನಿಕ ವಿತರಣೆಯ ಮೂಲಕ ನ್ಯಾಯಬೆಲೆಯಲ್ಲಿ ಅತ್ಯಾವಶ್ಯಕ ವಸ್ತುಗಳ ವಿತರಣೆ, ಕೇಂದ್ರ ಸರ್ಕಾರ ತನ್ನ ನೌಕರದಾರರಿಗೆ ಕೊಡ ಮಾಡಿರುವಷ್ಟೇ ರಾಜ್ಯ ಸರ್ಕಾರೀ ನೌಕರರಿಗೆ ತುಟ್ಟಿ ಭತ್ತೆ ನೀಡಿಕೆ, ಶೇ 8.33 ರಷ್ಟು ಬೋನಸ್ ಮಂಜೂರಾತಿ, ಸಾರ್ವಜನಿಕ ಕ್ಷೇತ್ರದ ನೌಕರರಿಗೆ ಸಿಗುತ್ತಿರುವಷ್ಟು ವೇತನದಲ್ಲಿ ಹೆಚ್ಚಳ, ಅದು ಸಿಗುವ ತನಕ ತಾತ್ಪೂರ್ತಿಕ ಪರಿಹಾರ, ರಾಜ್ಯ ಸರ್ಕಾರಗಳಿಗೆ ಹೆಚ್ಚು ಆರ್ಥಿಕ ಸಹಾಯ, ನೌಕರ ದಾರರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವಂಥ ಕಾನೂನುಗಳನ್ನು ಹಲವಾರು ರಾಜ್ಯ ಸರ್ಕಾರಗಳು ಅನುಸರಿಸುತ್ತಿದ್ದು, ಅವುಗಳನ್ನೂ ಸರ್ವಾಧಿಕಾರಿ ಕಾಯ್ದೆಗಳನ್ನೂ, ಬೇರೆ ಬೇರೆ ರಾಜ್ಯಗಳಲ್ಲಿ ನೌಕರದಾರರ ಮೇಲೆ ಹೇರಿರುವ ಶಿಸ್ತು ಭಂಗ ಕ್ರಮಗಳನ್ನೂ ವಾಪಸ್ ಪಡೆಯಬೇಕೆಂದೂ, ಎಲ್ಲ ರಾಜ್ಯಗಳ ನೌಕರ ದಾರರಿಗೆ ಕಾರ್ಮಿಕ ಸಂಘಟನೆಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿರಬೇಕೆಂದೂ ಕೇಳಿಕೊಳ್ಳುವ ಬೇಡಿಕೆಗಳ ಸಲುವಾಗಿ 4-9-84 ರಂದು ದೇಶಾದ್ಯಂತ ಎಲ್ಲ ರಾಜ್ಯ ಸರ್ಕಾರಿ ನೌಕರ ದಾರರೂ ಒಂದು ದಿವಸ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ. ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರ ದಾರರ ಫೆಡರೇಷನ್ ಈ ಕರೆ ಕೊಟ್ಟಿದೆ. ಇವರ ಬೇಡಿಕೆಗಳು ಬರೀ ನೌಕರ ದಾರರಿಗಷ್ಟೇ ಸಂಬಂಧ ಪಟ್ಟಿಲ್ಲ. ಅವು, ಸಾರ್ವಜನಿಕರ ಬೇಡಿಕೆಗಳನ್ನೂ ಒಳಗೊಂಡಿವೆ. ಬ್ಯಾಂಕ್ ನೌಕರ ದಾರರಿಗೂ ಇದು ಸಂಬಂಧ ಇರುವುದರಿಂದ, ಈ ಮುಷ್ಕರವನ್ನು ಯಶಸ್ವಿಗೊಳಿಸಲು ಎಲ್ಲ ರೀತಿಯ ಸಹಾಯ ನೀಡಬೇಕೆಂದು ಭಾರತದ ಬ್ಯಾಂಕ್ ನೌಕರ ದಾರರ ಫೆಡರೇಷನ್ ಕರೆ ನೀಡಿದೆ.

ಕಾರ್ಮಿಕ ಸಚಿವರೊಡನೆ ಭೇಟಿ, ಮಾತುಕತೆ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪ, ಉಪಾಧ್ಯಕ್ಷ ಕೆ. ಪೂಸಬ್ಬರು 21-8-84 ರಂದು ರಾಜ್ಯದ ಕಾರ್ಮಿಕ ಸಚಿವ ಎಂ. ಪಿ. ಪ್ರಕಾಶರನ್ನು ಭೇಟಿ ಮಾಡಿ ಕನಿಷ್ಠ ಕೂಲಿಯ ಪ್ರಕಟನೆಯಲ್ಲಿ ಆಗಿರುವ ಅನ್ಯಾಯ, ಇ. ಎಸ್. ಐ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲದಿರುವುದು, ಮಂಗಳೂರಿನಲ್ಲಿ ಆಂಬುಲೆನ್ಸ್ ಇಲ್ಲದಿರುವುದು, ಕಾರ್ಮಿಕ ನ್ಯಾಯಾಲಯದಲ್ಲಿ ನ್ಯಾಯಾಧೀಶರಿಲ್ಲದಿರುವುದು, ಪರ್ಮಿಟ್ ಕೊಟ್ಟವರು ಬಸ್ ನಡೆಸದ್ದೆ ಬೇರೆಯವರು ಬಸ್ ನಡೆಸುವುದರಿಂದ ಕಾರ್ಮಿಕರಿಗೆ ಆಗುವ ವಂಚನೆ, ರಸ್ತೆ ಸಾರಿಗೆಯಲ್ಲಿ ದ. ಕ. ಜಿಲ್ಲೆಯಲ್ಲಿ ಕೆಲವು ಮಾಲೀಕರು ಕನಿಷ್ಠ ಕೂಲಿ ಕೊಡದಿರುವುದನ್ನು ಗಮನಕ್ಕೆ ತಂದಾಗಲೂ ಅಧಿಕಾರಿಗಳು ಸುಮ್ಮನೆ ಇರುವುದು, ಹೆಂಚಿನ ಕೈಗಾರಿಕೆಯಲ್ಲಿ ಕೆಲಸದ ಪರಿಶೀಲನೆ ಬಗ್ಗೆ ಒಂದು ಸಮಿತಿಯನ್ನು ರಚಿಸುವ ಹಿಂದಿನ ಕಾರ್ಮಿಕ ಸಚಿವ ಅಜೀಜ್ ಸೇಟರ ಆಶ್ವಾಸನೆ ನೆರವೇರದಿರುವುದು, 25-1-84 ರಂದು ತೋಟ ಕಾರ್ಮಿಕರ ಮುಷ್ಕರದ ಬಗ್ಗೆ ಅಜೀಜ್ ಸೇಠರ ಮುಂದೆ ಆದ ಒಪ್ಪಂದದ ಪ್ರಕಾರ ಈ ವರೆವಿಗೆ ಕಾರ್ಮಿಕ ಆಯುಕ್ತರು ತ್ರಿಪಕ್ಷೀಯ ಸಭೆಯನ್ನು ಕರೆಯದಿರುವುದೂ ಮೊದಲಾದ ವಿಷಯಗಳನ್ನು ನೂತನ ಕಾರ್ಮಿಕ ಸಚಿವರ ಗಮನಕ್ಕೆ ತಂದರು. ಮಂಗಳೂರಿನ ಬೋಳಾರದಲ್ಲಿರುವ ಇ. ಎಸ್. ಐ. ಡಿಸ್ಪೆನ್ಸರಿಯನ್ನು ಅಲ್ಲಿಂದ ತೆಗೆದು ಬೇರೆ ಕಡೆ ಮಾಡುವುದನ್ನು ವಿರೋಧಿಸುವ ಪತ್ರವನ್ನು ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯವರು ಇ. ಎಸ್. ಐ. ಡೈರೆಕ್ಟರಿಗೆ ಬರೆದಿದ್ದಾರೆ.

ಯಶಸ್ವಿ ಆಮರಣ ಉಪವಾಸ

ಹರಿಹರ ಪಾಲಿ ಫೈಬರ್ ಕಾರ್ಖಾನೆಯಲ್ಲಿ ದುಡಿಯುತ್ತಿರುವ ನಾಲ್ಕು ಕನ್‌ಸ್ಟ್ರಕ್ಷನ್ ಕೆಲಸಗಾರರನ್ನು ಅನ್ಯಾಯವಾಗಿ ತೆಗೆದು ಹಾಕಿದ್ದರ ವಿರುದ್ಧ ಹರಿಹರ ಪಾಲಿ ಫೈಬರ್ ಕನ್‌ಸ್ಟ್ರಕ್ಷನ್ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷರಾದ ವಿ. ಜೆ. ಕೆ. ನಾಯರ್ ಅವರು ಆಗಸ್ಟ 7 ರಿಂದ ಉಪವಾಸ ಕೈಗೊಂಡಿದ್ದರು. ಉಪವಾಸ ಶುರುವಾದ ಕೂಡಲೇ ಕೆಲಸದಿಂದ ವಜಾ ಮಾಡಿದ್ದ ಇಬ್ಬರನ್ನು ಹೊಸದಾಗಿ ಕೆಲಸದ ಮೇಲೆ ತೆಗೆದುಕೊಳ್ಳುವ ಪತ್ರ ಬಂತು. ಆದರೆ ನಾಲ್ಕೂ ಜನರಿಗೂ ಕೆಲಸ ಸಿಗಲೇಬೇಕೆಂಬ ಉದ್ದೇಶದಿಂದ ಹೋರಾಟ ಮುಂದುವರಿಯಿತು. ತಾ|| 12 ರಂದು ರಾಣೆಬೆನ್ನೂರಿನ ಶಾಸಕರಾದ ಡಾ. ಬಿ. ಕೆ. ಪಾಟೀಲರು ಸತ್ಯಾಗ್ರಹದ ಸ್ಥಳಕ್ಕೆ ಬಂದು, ಇನ್ನಿಬ್ಬರು ಕೆಲಸಗಾರರನ್ನು ಕೆಲಸದ ಮೇಲೆ ತೆಗೆದುಕೊಳ್ಳುವಂತೆ ಮಾಲಕರ ಮೇಲೆ ಒತ್ತಾಯ ತಂದು ಅವರಿಗೆ ಕೆಲಸ ಕೊಡಿಸುವ ಆಶ್ವಾಸನೆ ತಂದ ಕಾರಣ ಸಂಜೆ 7 ಗಂಟೆಗೆ ಉಪವಾಸ ಸತ್ಯಾಗ್ರಹ ಕೊನೆಗೊಳಿಸಲಾಯಿತು. ಈ ಹೋರಾಟ ಕೆಲಸಗಾರರಲ್ಲಿ ಹೊಸ ಚೈತನ್ಯ ತುಂಬಿದೆ.

ಪ್ರಜಾಪ್ರಭುತ್ವದ ಕೊಲೆ ವಿರುದ್ಧ ಬಂಡೇಳೋಣ

— ಎನ್. ಕೆ. ಉಪಾಧ್ಯಾಯ

ಮೂರು ತಿಂಗಳೊಳಗೆ ಎರಡನೇ ಸಲ ಪ್ರಜಾಪ್ರಭುತ್ವದ ಕೊಲೆ ನಡೆದಿದೆ. ಈ ವರ್ಷದ ಕೊನೆಯೊಳಗಾಗಿ ಇನ್ನುಳಿದ ಮೂರು ಕಾಂಗ್ರೆ ವಿರೋಧಿ ರಾಜ್ಯಗಳಲ್ಲಿಯೂ ಇಂಥದ್ದೇ ಕೊಲೆ ನಡೆಯುತ್ತದೋ ಹೇಗೆಂಬುದನ್ನು ಈಕ್ಷಿಸಬೇಕಾಗಿದೆ

ಜೂನ್ 6 ರಂದು ಜಮ್ಮು-ಕಾಶ್ಮೀರದ ಡಾ|| ಫರೂಕ್ ಅಬ್ದುಲ್ಲಾ ಸರಕಾರವನ್ನು ಉರುಳಿಸಿ "ಷಾ" ಸರಕಾರ ರಚಿಸಲಾಯಿತು. ಆಗಸ್ಟ್ 16 ರಂದು ಆಂಧ್ರದಲ್ಲಿಯು ಎನ್. ಟಿ. ರಾಮರಾವ್ ಸರಕಾರ ಕಿತ್ತೊಗೆದು ಭಾಸ್ಕರ ರಾವ್ ಸರಕಾರ ರಚಿಸಲಾಯಿತು. ಭಾರತ ದೇಶದ ಪ್ರಜಾಪ್ರಭುತ್ವ ಚಳುವಳಿಯ ಚರಿತ್ರೆಯಲ್ಲಿ ಕಪ್ಪಕ್ಷರಗಳಲ್ಲಿ ಬರೆದಿಡ ತಕ್ಕಂತ ಘಟನೆಗಳಿವಾಗಿವೆ.

ಕಾಶ್ಮೀರದಲ್ಲಿಯಂತೆಯೇ ಆಂಧ್ರದಲ್ಲಿ ಕೂಡ ರಾಮರಾವ್ ಅವರು ತಮ್ಮ ಬಹುಮತವನ್ನು ಕಳೆದುಕೊಂಡಿದ್ದಾರೆಂದು "ಮನದಟ್ಟು" ಮಾಡಿಕೊಳ್ಳುವಲ್ಲಿ ಗವರ್ನರ್ ರಾಮಲಾಲ್ ಅವರು ಹಿಂಜರಿಯಲಿಲ್ಲ. ತಮಗೆ ಬಹುಮತವಿದೆಯೋ ಇಲ್ಲವೊ ಎಂಬುದನ್ನು ಶಾಸನಸಭೆಯಲ್ಲಿ ನಿರ್ಣಯಿಸಬೇಕೆಂಬ ರಾಮರಾವ್ ಅವರ ವಾದವನ್ನು ಗವರ್ನರ್ ಒಪ್ಪಿಕೊಳ್ಳಲಿಲ್ಲ. ಆಂಧ್ರದಲ್ಲಿ ಒಬ್ಬ "ಷಾ"ನನ್ನು ಹುಟ್ಟಿಸಿ ಅವನ ಮೂಲಕ ರಾಮರಾವ್ ಸರಕಾರ ಉರುಳಿಸುವುದೇ ತಮ್ಮ ಆದ್ಯಕರ್ತವ್ಯವೆಂದು ತಿಳಿದೇ ಗವರ್ನರ್ ರಾಮಲಾಲ್ ರಾಮರಾವ್ ಮಂತ್ರಿಮಂಡಲವನ್ನು ವಿಸರ್ಜಿಸಿ ಸರಕಾರ ರಚಿಸಲು ಭಾಸ್ಕರ ರಾವ್‌ಗೆ ಅವಕಾಶ ಮಾಡಿಕೊಟ್ಟರು. ಇಂದಿರಾ ಕಾಂಗ್ರೆಸ್ ಅಂಥ ಕ್ರಮವನ್ನು ಸಂಪೂರ್ಣ ಸಮರ್ಥಿಸಿತು.

ಆಂಧ್ರ ಶಾಸನ ಸಭೆಯ 295 ಶಾಸಕರ ಪೈಕಿ ತನಗೆ 168 ಶಾಸಕರ ಬೆಂಬಲವಿದ್ದು ಮೂರು ದಿವಸದೊಳಗಾಗಿ ಶಾಸನ ಸಭೆಯಲ್ಲಿ ತನ್ನ ಬಹುಮತವನ್ನು ಪ್ರದರ್ಶಿಸುವ ಆಶ್ವಾಸನೆ ನೀಡಿದ್ದರೂ ಕೂಡ ಗವರ್ನರ್ ಆ ಸೂಚನೆಯನ್ನು ತಳ್ಳಿ ಹಾಕಿ ಭಾಸ್ಕರರಾವ್ ಅವರು ಒಂದು ತಿಂಗಳೊಳಗಾಗಿ ತಮ್ಮ ಬಹುಮತ ತೋರಿಸ ಬೇಕೆಂದು ಹೇಳಿರುವುದು "ಪಕ್ಷಾಂತರದ" ಗೊಂಬೆಯಾಟಕ್ಕೆ ಕಾಲಾವಕಾಶ ಮಾಡಿಕೊಟ್ಟಂತಾಗಿದೆ. ಗವರ್ನರ್ ರಾಮಲಾಲ್‌ರ ಈ ಕೃತಿ ಅತ್ಯಂತ ಹೀನಾಯವಾಗಿದೆ, ಪ್ರಜಾಪ್ರಭುತ್ವಕ್ಕೂ, ಪಾರ್ಲಿಮೆಂಟರಿ ಪದ್ಧತಿಗೂ ತೀರ ವಿರೋಧವಾಗಿದೆ.

ಈ ವರ್ಷದ ಕೊನೆಯೊಳಗಾಗಿ ಲೋಕಸಭೆಯ ಚುನಾವಣೆ ನಡೆಯಲಿದ್ದು ಅದರ ಪೂರ್ವಭಾವಿಯಾಗಿ ನಮ್ಮ ದೇಶದಲ್ಲಿರುವ 5 ಕಾಂಗ್ರೆ ವಿರೋಧಿ ಸರಕಾರಗಳನ್ನೂ "ಏನಕೇನ ಪ್ರಕರಣ" ಉರುಳಿಸಿ ಲೋಕಸಭೆಯಲ್ಲಿ ಬಹುಮತ ಗಳಿಸುವ ದೂರದೃಷ್ಟಿಯನ್ನು ಇಂದಿರಾಗಾಂಧಿ ಇಟ್ಟುಕೊಂಡಿರುವುದು ಸ್ಪಷ್ಟ. ತನ್ನ ರಾಜಕೀಯ ಆರ್ಥಿಕ ಧೋರಣೆಗಳಿಂದಾಗಿ ದೇಶ ಎದುರಿಸುತ್ತಿರುವ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸಲು ವಿಫಲರಾಗಿರುವುದರಿಂದ, ಆ ನೀತಿಯ ಫಲವಾಗಿ ಜನರಲ್ಲಿ ಅಸಮಾಧಾನ-ಅಶಾಂತಿ ಬೆಳೆದು ಕಾಂಗ್ರೆ ಪ್ರಭಾವ ಕುಂದುತ್ತಿರುವಾಗ, ತನ್ನ ಅಧಿಕಾರವನ್ನು ಉಳಿಸಲು ಇಂದಿರಾಗಾಂಧಿಯ ಮುಂದಿರುವ ಏಕೈಕ ಶಸ್ತ್ರ ಪ್ರಜಾಪ್ರಭುತ್ವದ ಕೊಲೆಯಲ್ಲದೆ ಮತ್ತೇನಲ್ಲ.

1959 ರಲ್ಲಿ ಕೇರಳದಲ್ಲಿದ್ದ ಇ.ಎಂ.ಎಸ್. ನಂಬೂದಿರಿಪಾಡ್ ಸರಕಾರವನ್ನು ವಿಸರ್ಜಿಸಿದಾಗ "ನಮಗೇನು ಸಂಬಂಧ, ಕಮ್ಯುನಿಸ್ಟ್ ಪಕ್ಷದ ಸರಕಾರ ಹೋಯಿತಷ್ಟೆ" ಎಂಬ ಅಭಿಪ್ರಾಯವನ್ನು ವಿರೋಧ ಪಕ್ಷಗಳು ವ್ಯಕ್ತ ಮಾಡಿದ್ದವು. 1971 ರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಅದರ ರಂಗದಲ್ಲಿದ್ದವರಿಗೆ ಶಾಸನಸಭೆಯಲ್ಲಿ ಬಹುಮತ ವಿದ್ದರೂ ಕೂಡ ಇಂದಿರಾಗಾಂಧಿ ಸಿಪಿಐ (ಎಂ) ಗೆ ಸರಕಾರ ರಚಿಸಲು ಅವಕಾಶ ಮಾಡಿಕೊಟ್ಟಿಲ್ಲ. ಆ ಸಮಯದಲ್ಲಿ ಕೂಡ ವಿರೋಧ ಪಕ್ಷಗಳು ಇಂದಿರಾಗಾಂಧಿಯ ಕೃತಿಯನ್ನು ಖಂಡಿಸಲು-ವಿರೋಧಿಸಲು – ಪ್ರತಿಭಟಿಸಲು ಮುಂದಾಗಲಿಲ್ಲ.

ಡಾ| ಅಬ್ದುಲ್ಲಾ ಸರಕಾರ ವಿಸರ್ಜನೆಯಾದಾಗ ಹಳೇ ತಿಳುವಳಿಕೆ ಹೋಗಿ ಸ್ವಲ್ಪ ಪ್ರತಿಭಟನೆ ವ್ಯಕ್ತ ಮಾಡಲು ಸಾಧ್ಯವಾಯಿತು. ಈಗ ರಾಮರಾವ್ ಸರಕಾರ ವಿಸರ್ಜನೆಯಾದಾಗ ಪ್ರತಿಭಟನೆ ತೀವ್ರ ಸ್ವರೂಪ ತಾಳಿದೆ.

ಚುನಾವಣೆಗಳಲ್ಲಿ ಬಹುಮತ ಪಡೆದು ಆರಿಸಿ ಬಂದ ಪಕ್ಷಕ್ಕೆ ಸಂವಿಧಾನಾತ್ಮಕವಾಗಿ ಐದು ವರ್ಷ ಆಡಳಿತೆ ನಡೆಸುವ ಹಕ್ಕಿದೆಂಬುದನು ಇಂದಿರಾ ಗಾಂಧಿ ಒಪ್ಪುತ್ತಿಲ್ಲ. ಅಂಥ ಸರಕಾರಗಳಿಗೆ ಸರ್ವ ವಿಧದಿಂದಲೂ ಅನ್ಯಾಯವೆಸಗಿ, ಪಕ್ಷಾಂತರಕ್ಕೆ ಪ್ರಚೋದನೆ ಕೊಟ್ಟು ತನ್ನ ಪ್ರಯತ್ನದಿಂದಾಗಿ "ಷಾ" ಗಳನ್ನು ಸೃಷ್ಟಿಸಿ, ಸಾಧ್ಯವಾದರೆ ಬದ್ಲಿ ಸರಕಾರಗಳನ್ನು ರಚಿಸಿ, ಅದು ಸಾಧ್ಯವಾಗದಿದ್ದಲ್ಲಿ, ಬಹುಮತವಿರುವ ಸರಕಾರಗಳನ್ನು ಸಂವಿಧಾನಕ್ಕೆ ವಿರುದ್ಧವಾಗಿಯೇ ವಿಸರ್ಜಿಸುವ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಇಂದಿರಾಗಾಂಧಿ ಅನುಸರಿಸುತ್ತಿದ್ದಾರೆಂಬ ಅಂಶ ಇಲ್ಲಿ ಗಮನಿಸಬೇಕಾಗಿದೆ. ಅದ್ದರಿಂದ ಅಬ್ದುಲ್ಲಾ ಸರಕಾರ, ರಾಮರಾವ್ ಸರಕಾರ ಹೋಯಿತೆಂಬುದೇ ಮಹತ್ವವಲ್ಲ. ಆ ಎರಡು ರಾಜ್ಯಗಳಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗಿದೆಂದೂ, ಅದನ್ನು ವಿರೋಧಿಸಿ, ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಲಿಕ್ಕೆ ಚಳುವಳಿ ನಡೆಯುವುದು ಅಗತ್ಯವೆಂಬುದನ್ನು ಅರಿತು ಕೊಳ್ಳಬೇಕು. ಇಲ್ಲಿ ಬರುವುದು ಯಾವ ವ್ಯಕ್ತಿ ಅಥವಾ ಪಕ್ಷದ ಸರಕಾರವಲ್ಲ. ಸಂವಿಧಾನಾತ್ಮಕವಾಗಿ ಬಹುಮತವಿರುವ ಪಕ್ಷಕ್ಕೆ ಅಧಿಕಾರ ನಡೆಸುವ ಹಕ್ಕಿದೆಯೋ ಇಲ್ಲವೇ ಎಂಬ ಪ್ರಶ್ನೆಯಾಗಿರುತ್ತದೆ. ಭಾರತ ದೇಶದ ಜನತೆ ಹಾಗೂ ವಿರೋಧ ಪಕ್ಷಗಳು ಈ ಅಂಶವನ್ನು ಗಮನಿಸುವುದು ಅತ್ಯಗತ್ಯ.

ಆಳುವ ಪಕ್ಷದ ಶಾಸಕರ ಪಕ್ಷಾಂತರದಿಂದ ಕಾಶ್ಮೀರ ಮತ್ತು ಆಂಧ್ರ ಸರ್ಕಾರಗಳನ್ನು ವಿಸರ್ಜಿಸಲು ಇಂದಿರಾ ಗಾಂಧಿಗೆ ಸಾಧ್ಯವಾಯಿತು ಪಕ್ಷಾಂತರಿತ ಸರ್ಕಾರಕ್ಕೆ ತನ್ನ ಬಹುಮತ ಪ್ರದರ್ಶಿಸಲು ಮೂರು ದಿನದ ಅವಕಾಶ ಕೊಡದೆ ಮೂವತ್ತು ದಿವಸಗಳ ಅವಕಾಶ ಕೊಡುತ್ತಿರುವುದರಿಂದ "ಶಾಸಕರ ವ್ಯಾಪಾರ" ನಡೆಸಲು ಪಕ್ಷಾಂತರಿಗಳಿಗೆ ಗವರ್ನರರು ಅವಕಾಶ ಮಾಡಿಕೊಟ್ಟಂತಾಗಿದೆ.

ಕರ್ನಾಟಕದಲ್ಲಿ ಪಕ್ಷಾಂತರದ ಪ್ರಯತ್ನಕ್ಕೆ ಫಲಿಸಲಿಲ್ಲ ಇಷ್ಟು ದಿವಸ. ಆದರೆ ಬಂಡವಾಳಶಾಹಿ ಪಕ್ಷದ ಶಾಸಕರು ಇಂದಿರಾ ಗಾಂಧಿಯ ಆಮಿಷೆಗೆ ಬಲಿ ಬೀಳಲಾರರೆಂದು ಖಾತ್ರಿಯಾಗಿ ಹೇಳಿಕೊಳ್ಳುವುದು ಸಾಧ್ಯವಿಲ್ಲ.

ಪಶ್ಚಿಮ ಬಂಗಾಲ, ತ್ರಿಪುರಗಳಲ್ಲಿಯ ಪರಿಸ್ಥಿತಿ ಬೇರೆ. ಅಲ್ಲಿ ಪಕ್ಷಾಂತರದ ಚದುರಂಗದಾಟ ನಡೆಯುವುದಿಲ್ಲ. ಅಲ್ಲಿ ಸಿ. ಪಿ. ಐ. (ಎಂ) ಪಕ್ಷದ ಮುಖಂಡತ್ವದ ಎಡರಂಗ ಸರ್ಕಾರ ಅಧಿಕಾರದಲ್ಲಿದೆ. ಪಕ್ಷಾಂತರಕ್ಕೆ ಅಲ್ಲಿ ಅವಕಾಶವಿಲ್ಲ. ಅದ್ದರಿಂದ ಆ ಎರಡು ರಾಜ್ಯಗಳಲ್ಲಿ ಇಂದಿರಾ ಗಾಂಧಿ ಹಿಂಸಾಚಾರಕ್ಕೆ ಪ್ರಚೋದನೆ ನೀಡುತ್ತಿದ್ದಾರೆ. ತ್ರಿಪುರಾದಲ್ಲಿ ಈಗಾಗಲೇ ಅಂಥ ಪ್ರಯತ್ನ ನಡೆಯುತ್ತಿದೆ ಗುಡ್ಡಗಾಡು ಜನಾಂಗದವರನ್ನು ಎತ್ತಿ ಕಟ್ಟಿ ದಂಗೆ ಮಾಡಿಸುತ್ತಿದಾರೆ. ಪ. ಬಂಗಾಲದಲ್ಲಿ ಕಾಂಗ್ರೆಸ್ಸಿನವರಿಂದ ಗುಂಡಾಗಿರಿ ಹಿಂಸಾಕೃತ್ಯಗಳನು ನಡೆಸಿ ಕಾಯಿದೆ ಕಾನೂನಿನ ಸಮಸ್ಯೆ ಉಂಟುಮಾಡುವ ಸಂಭವ ಇಲ್ಲದಿಲ್ಲ. ಕರ್ನಾಟಕದಲ್ಲಿ ಕೂಡ ಆ ರೀತಿ ಮಾಡುವ ಸಾಧ್ಯತೆಯಿದೆ. ಈ ಮೂರು ರಾಜ್ಯಗಳಲ್ಲಿ ಪಕ್ಷಾಂತರದ ಬಾಣ ನಾಟದಿರುವಾಗ, ಕಾಯಿದೆ-ಕಾನೂನಿನ ಸಮಸ್ಯೆ ಉಂಟುಮಾಡಿ, ಕಾಶ್ಮೀರ ಆಂಧ್ರ ಸರ್ಕಾರಗಳ ಗತಿಯನ್ನೇ ಈ ರಾಜ್ಯಗಳೂ ಎದುರಿಸುವಂತೆ ಮಾಡಬಹುದು. ಆದರೆ ಅಂಥ ಪ್ರಯತ್ನಕ್ಕೆ ಸುಲಭವಾಗಿ ಯಶಸ್ಸು ಸಿಗುತ್ತದೆಂದು ಭಾವಿಸುವುದು ತಪ್ಪು. ಅಂಥ ಪ್ರಯತ್ನಗಳಿಗೆ ಈ ಹಿಂದೆ ಯಶಸ್ಸು ಸಿಗದಿದ್ದರಿಂದ ಮುಂದೆಯೂ ಕೂಡ ಅದು ಫಲಗೊಳ್ಳಬಹುದೆಂದೇ ಹೇಳಬಹುದಾಗಿದೆ.

1983 ಜನೇವರಿಯಲ್ಲಿ ನಡೆದ ಚುನಾವಣೆಯಲ್ಲಿ ಆಂಧ್ರ ಶಾಸಕ ಸಭೆಯ 294 ಸದಸ್ಯರ ಪೈಕಿ 201 ಸದಸ್ಯತ್ವ ಪಡೆಯಿತು ಈ ಪ್ರಚಂಡ ಗೆಲುವನ್ನು ಕಂಡು ಇಂದಿರಾ ಗಾಂಧಿ ಕೆಲವು ದಿವಸ ರಾಮರಾವ್ ಸರ್ಕಾರವನ್ನು ವಿರೋಧಿಸುವ ಪ್ರಯತ್ನ ಮಾಡಲಿಲ್ಲ. ಇಂಥ ಬಹುಮತದ ವಿರುದ್ಧ ಪಕ್ಷಾಂತರದ ಆಟ ನಡೆಸುವುದು ಅಪಾಯಕಾರಿ ಎಂದು ಅವರು ಭಾವಿಸಿರಬೇಕು. ಆದರೆ ಎನ್. ಟಿ. ರಾಮರಾವ್ ಅವರು ವಿಜಯವಾಡದಲ್ಲಿ ವಿರೋಧ ಪಕ್ಷಗಳ ಸಮಾವೇಶ ಕರೆದು ಕೇಂದ್ರ ಸರ್ಕಾರದ ವಿರುದ್ಧ ಬಂಡೆಬ್ಬಿಸಿದಾಗ, ಅನಂತರ ಫರೂಕ್ ಅಬ್ದುಲ್ಲಾ ಸರ್ಕಾರವನ್ನು ಉರುಳಿಸಿದಾಗ ಅದನ್ನು ಪ್ರತಿಭಟಿಸಿದಾಗ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಿಂದ ಕಾಂಗ್ರೆ ವಿರೋಧ ಸರ್ಕಾರಗಳ ಮುಖ್ಯ ಮಂತ್ರಿಗಳು ಬಹಿಷ್ಕಾರ ಹಾಕುವಲ್ಲಿ ಮುಖಂಡತ್ವ ವಹಿಸಿದಾಗ ಇಂದಿರಾ ಗಾಂಧಿಯ ಕಣ್ಣು ಕೆಂಪಗಾಗಿರಬೇಕು. ಅಂದಿನಿಂದಲೇ "ವಿೂನು" ಹಿಡಿಯುವ ಪ್ರಯತ್ನ ನಡೆಸಿರ ಬೇಕು.

ಇತರ ರಾಜ್ಯಗಳಲ್ಲಿ ಯಂತೆಯೇ ಆಂದ್ರದಲ್ಲಿ ಕೂಡ ಅಧಿಕಾರಲಾಲಸಿಗಳು, ಭ್ರಷ್ಟಾಚಾರಿಗಳು ತೆಲುಗು ದೇಶಂ ಪಕ್ಷದಲ್ಲಿ ಸೇರಿಕೊಂಡಿದ್ದರು. ಭ್ರಷ್ಟಾಚಾರ ಆರೋಪಕ್ಕಾಗಿ ಭಾಸ್ಕರರಾವರನ್ನು ಮಂತ್ರಿಮಂಡಲದಿಂದ ವಜಾ ಮಾಡಿದಾಗ ದೊಡ್ಡ ವಿೂನನ್ನೇ ಹಿಡಿಯಲು ಇಂದಿರಾ ಗಾಂಧಿಗೆ ಒಳ್ಳೆ ಅವಕಾಶ ಸಿಕ್ಕಿತು.

ಪಕ್ಷಾಂತರಕ್ಕೆ ಅಶಾಂತಿಗೆ ಸಹಾಯ ಮಾಡಲು ರಾಜ್ಯಪಾಲರು ಅತ್ಯಗತ್ಯ. ಇಂದಿರಾ ಗಾಂಧಿ ನೇಮಿಸುವ ರಾಜ್ಯಪಾಲರೆಲ್ಲ ಹೆಚ್ಚಾಗಿ ಆಕೆಯ 'ಜೀಹುಜೂರ' ಗಳೇ ಆಗಿರುವುದರಿಂದ ಬಹುಮತ ವಿರುವ ಸರ್ಕಾರಗಳನ್ನು ಅಕ್ರಮವಾಗಿ ವಿಸರ್ಜಿಸಲು ಸಾಧ್ಯವಾಗುತ್ತಿದೆ. ತನ್ನ ಬಹುಮತ ಪ್ರದರ್ಶಿಸಲು ಆಗಸ್ಟ್ 18 ರಂದು ವಿಧಾನ ಸಭೆಯ ಸಭೆ ಕರೆಯ ಬೇಕೆಂದು ಗವರ್ನರರಿಗೆ ರಾಮರಾವ್ ಅವರು ವಿನಂತಿ ಮಾಡಿಕೊಂಡಿದ್ದರೂ ಕೂಡ, ಅಂಥ ಅವಕಾಶವನ್ನೊದಗಿಸದೆ, ಸರ್ಕಾರ ರಚಿಸಲು ಭಾಸ್ಕರ ರಾವ್ ಅವರಿಗೆ ಅವಕಾಶ ಮಾಡಿಕೊಟ್ಟು ಮೂವತ್ತು ದಿವಸದೊಳಗೆ ತನಗೆ ಬಹುಮತ ಇದೆಂಬುದನ್ನು ತೋರಿಸಬೇಕೆಂದು ಹೇಳಿರುವುದನ್ನು ನೋಡುವಾಗ ರಾಜ್ಯಗಳಿಗೆ ಗವರ್ನರರ ಅವಶ್ಯಕತೆ ಇದೆಯೇ? ಗವರ್ನರರ ಪಾತ್ರವೇನು ಎಂಬುದರ ಕುರಿತು ಸುದೀರ್ಘ ಚರ್ಚೆ ನಡೆಸುವುದು ಅತ್ಯಗತ್ಯ.

ಆಂಧ್ರದಲ್ಲಿಯ ಪ್ರಜಾಪ್ರಭುತ್ವದ ಕೊಲೆ, ಕಾಶ್ಮೀರ, ಆಂದ್ರ, ಕರ್ನಾಟಕ ಗಳಿಗಷ್ಟೇ ಸೀಮಿತವಾಗಿಲ್ಲ. ಇದು ದೇಶದ ಜನರ ಮುಂದಿರುವ ಮೂಲಭೂತ ಸ್ವಾತಂತ್ರ್ಯದ ಪ್ರಶ್ನೆಯಾಗಿದೆ. ಜೀವಕೊಟ್ಟು, ರಕ್ತ ಸುರಿಸಿ ಸ್ವಾತಂತ್ರ್ಯ ಪಡೆದಿದ್ದೇವೆ. ಈ ಸ್ವತಂತ್ರ ದೇಶವಲ್ಲ ಪ್ರಜಾ ಪ್ರಭುತ್ವ ರೀತಿಗನುಸಾರವಾಗಿ ಸರ್ಕಾರ ನಡೆಯ ಬೇಕೇ ಅಥವಾ ಹಿಟ್ಲರ್ ಸಾದರಕನಂಥ ಇಂದಿರಾ ಗಾಂಧಿಯ ಏಕವ್ಯಕ್ತಿ ಅಧಿಕಾರ ಇರಬೇಕೇ ಎಂಬ ಪ್ರಶ್ನೆಯಾಗಿದೆ. ಏಕವ್ಯಕ್ತಿ ಸರ್ವಾಧಿಕಾರವನ್ನು 1977ರಲ್ಲಿ ದೇಶದ ಜನತೆ ಕಿತ್ತೊಗೆದಿತ್ತು. ಆದರೆ 1980 ರಲ್ಲಿ ವೇಷ ಬದಲಿಸಿ ಸರ್ವಾಧಿಕಾರಿ ಮತ್ತೆ ಅಧಿಕಾರಕ್ಕೇರುವಂತಾಯಿತು. ಜನತಾ ಪಕ್ಷದೊಳಗಿನ ಆಂತರಿಕ ಜಗಳ, ಅಂದಿನ ಜನಸಂಘದ ಪ್ರವೃತ್ತಿ, ಜೀವನದಲ್ಲೊಮ್ಮೆ ಪ್ರಧಾನ ಮಂತ್ರಿಯಾಗಬೇಕೆಂಬ ಚರಣ್ ಸಿಂಗ್ ಅವರ ಅಭಿಲಾಷೆಗಳೆಲ್ಲ ಜನರಲ್ಲಿ ನಿರಾಶೆಯನ್ನುಂಟು ಮಾಡಿ ಎರಡನೇ ಸಲ ಸರ್ವಾಧಿಕಾರಿ ಶಕ್ತಿ ಅಧಿಕಾರ ಪಡೆಯುವಂತೆ ಮಾಡಿತು. ಆ ತಪ್ಪಿನಿಂದಾಗಿಯೇ ಈಗ ಪ್ರಜಾ ಪ್ರಭುತ್ವದ ಕೊಲೆ ನಡೆದಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹೇಳುವಂತೆ ಇಂದಿರಾ ಗಾಂಧಿಯ ಏಕವ್ಯಕ್ತಿ ಸರ್ವಾಧಿಕಾರವನ್ನು ಸೋಲಿಸಲೇ ಬೇಕು. ಈಗ ಅಂಥ ಅಭಿಪ್ರಾಯವನ್ನು ಬೇರೆ ವಿರೋಧ ಪಕ್ಷಗಳೂ ವ್ಯಕ್ತ ಮಾಡುತ್ತಿವೆ. ಎಲ್ಲರೂ ಸೇರಿ ಪ್ರಜಾಪ್ರಭುತ್ವದ ಕೊಲೆಯನ್ನು ಪ್ರತಿಭಟಿಸಲು ಮುಂದಾಗುತ್ತಿವೆ. ಇದು ಸ್ವಾಗತಾರ್ಹ. ಆದರೆ ಜನರ ಮುಂದೆ ಬದಲಿ ಕಾರ್ಯಕ್ರಮ ತೆಗೆದುಕೊಂಡು ಹೋಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯು ಕಾಂಗ್ರೆಯನ್ನು ಸೋಲಿಸಿ ಬದಲಿ ಸರಕಾರ ರಚಿಸುವಂಥ ಶಕ್ತಿ ಪಡೆದಿದೆಂಬುದನ್ನು ತೋರ್ಪಡಿಸುತ ತನಕ ಜನರಲ್ಲಿ ವಿಶ್ವಾಸ ಹುಟ್ಟಿಬರಲು ಸಾಧ್ಯವಿಲ್ಲ. ಪಶ್ಚಿಮ ಬಂಗಾಲ, ತ್ರಿಪುರಾಗಳ ಸರಕಾರ ಯಾವ ರೀತಿ ಜನರ ವಿಶ್ವಾಸ ಗಳಿಸಿ ಎರಡನೇ ಸಲ ಅಧಿಕಾರ ಉಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದೆಯೋ, ಅದೇ ರೀತಿ ಇಡೀ ದೇಶದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ

(6 ನೇ ಪುಟ ನೋಡಿ)

ಆರ್ಥಿಕ ಸಮೀಕ್ಷೆ :

— ಆರ್. ಚಂದ್ರ

ಏಳನೇ ಪಂಚವಾರ್ಷಿಕ ಯೋಜನೆ ಮತ್ತು ಬಡತನ ನಿವಾರಣೆ

ಪ್ರಾರಂಭದಲ್ಲಿಯೇ ಮುಗ್ಗರಿಕೆ

ಕೇಂದ್ರ ರಾಜ್ಯ ಸಂಬಂಧಗಳ ಹೆಚ್ಚುತ್ತಿರುವ ಬಿಕ್ಕಟ್ಟಿನಿಂದಾಗಿ, ಏಳನೇ ಪಂಚವಾರ್ಷಿಕ ಯೋಜನೆ (1985-90) ರೂಪುಗೊಳ್ಳುವ ಪ್ರಾರಂಭದಲ್ಲಿಯೇ ಮುಗ್ಗರಿಸುತ್ತಿದೆ. ಯೋಜನಾ ಆಯೋಗವು ಸಿದ್ಧಪಡಿಸಿದ ಏಳನೇ ಯೋಜನೆಯ ಧ್ಯೇಯೋದ್ದೇಶಗಳ ಕರಡು ಪ್ರತಿಯನ್ನು ಕೇಂದ್ರ-ರಾಜ್ಯ ಸರಕಾರಗಳ ಪ್ರತಿನಿಧಿಗಳ ಚರ್ಚಿಸಿ ಅಂಗೀಕರಿಸಲು ಅತ್ಯುನ್ನತ ಮಟ್ಟದ ವೇದಿಕೆಯಾದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯನ್ನು ನವದೆಹಲಿಯಲ್ಲಿ ಜುಲೈ 12 ಮತ್ತು 13ರಂದು ಕರೆಯಲಾಗಿತ್ತು. ಆ ಸಭೆಯ ಮುಂದಿನ ದಿನವೇ ತಾ॥ 11 ರಂದು ಇಂದಿರಾ ಕಾಂಗ್ರೆಸ್‌ನ ಕೇಂದ್ರ ಸರಕಾರದ ಆದೇಶದಂತೆ ಜಮ್ಮು-ಕಾಶ್ಮೀರದ ಫರುಕ್ ಅಬ್ದುಲ್ಲಾ ಅವರ ಸಂಕಾರವನ್ನು ಅಲ್ಲಿನ ರಾಜ್ಯಪಾಲರು ಬೇಕು ಹರಿಯುವ ಮೊದಲೇ ಕಿತ್ತು ಹಾಕಿದ ವಿದ್ಯಮಾನ ಕೇಂದ್ರ-ರಾಜ್ಯಗಳ ಸಂಬಂಧದಲ್ಲಿ ಹೊಸ ಬಿಕ್ಕಟ್ಟನ್ನುಂಟು ಮಾಡಿತು. ಕೇಂದ್ರದ ಸರ್ವಾಧಿಕಾರಿ ಧೋರಣೆಯನ್ನು ವಿರೋಧ ಪಕ್ಷಗಳೂ ಪ್ರಜಾಪ್ರಭುತ್ವವಾದಿ ಸಂಘಟನೆಗಳೂ ದೇಶಾದ್ಯಂತ ಒಕ್ಕೊರಲಿನಿಂದ ತೀವ್ರವಾಗಿ ಪ್ರತಿಭಟಿಸಿದವು. ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯ ಸರಕಾರಗಳ ಮುಖ್ಯಮಂತ್ರಿಗಳಾದ ಜ್ಯೋತಿಬಸು (ಪ. ಬಂಗಾಳ) ನೃಪೇನ್ ಚಕ್ರವರ್ತಿ (ತ್ರಿಪುರ), ಎನ್. ಟಿ. ರಾಮರಾವ್ (ಆಂಧ್ರ) ಮತ್ತು ರಾಮಕೃಷ್ಣ ಹೆಗ್ಗಡೆ (ಕರ್ನಾಟಕ) ಮರುದಿನ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಈ ಅಹಿತಕರ ವಿದ್ಯಮಾನದ ವಿರುದ್ಧ ತಮ್ಮ ಪ್ರಬಲ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದರು. ಇಷ್ಟರಿಂದಲೂ ತೃಪ್ತರಾಗದೆ, ಅಧ್ಯಕ್ಷಸ್ಥಾನದಲ್ಲಿದ್ದ ಪ್ರಧಾನಿ ಇಂದಿರಾಗಾಂಧಿ ಈ ನಾಲ್ಕು ರಾಜ್ಯ ಸರಕಾರಗಳ ಅಧಿಕಾರಿಗಳನ್ನೂ ಸಭೆಯಿಂದ ಹೊರ ಹಾಕಿದರು ! ಸಭೆಯಲ್ಲಿ ಉಳಿದ ಕಾಂಗ್ರೆಸ್ ಕೇಂದ್ರ-ರಾಜ್ಯ ಸರಕಾರಗಳ ಪ್ರತಿನಿಧಿಗಳು ವಿರೋಧ ಪಕ್ಷಗಳ ನಾಲ್ಕು ರಾಜ್ಯ ಮುಖ್ಯಮಂತ್ರಿಗಳ ವಿರುದ್ಧವಾಗಿಯೂ, ಏಳನೇ ಯೋಜನೆಯ ಧ್ಯೇಯೋದ್ದೇಶಗಳ ಕರಡು ಪ್ರತಿಯ ಪರವಾಗಿಯೂ ಠರಾವುಗಳನ್ನು ಅಂಗೀಕರಿಸಿದರು ! ಇನ್ನು ಯಾವ ಚರ್ಚೆ ಇಲ್ಲದೆ ಏಳನೇ ಯೋಜನೆ ಜಾರಿಗೆ ಬರಲಿದೆ ! ನಮ್ಮ ಬಡತನವೆಲ್ಲಾ ನಿವಾರಣೆ ಆಗಲಿದೆ !

ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯನ್ನು ರಾಜಕೀಯ ವೇದಿಕೆಯಾಗಿಸಬಾರದೆಂದು ಇಂದಿರಾ ಕಾಂಗ್ರೆಸ್‌ನವರ ವಾದ. ಆದರೆ, ಈ ಹಿಂದೆ ಕಾ॥ ಇ.ಎಂ.ಎಸ್. ನಂಬೂದರಿಪಾದ್ ಕೇರಳದ ಮುಖ್ಯಮಂತ್ರಿಯಾಗಿದ್ದಾಗ ತನ್ನ ಸರಕಾರದ ಭದ್ರತೆಗೆ ಅಪಾಯದ ಕುರಿತು, ಮಹಾರಾಷ್ಟ್ರದ ಮುಖ್ಯಮಂತ್ರಿ ಎ. ಆರ್. ಅಂತುಳೆಯವರು ಅಧ್ಯಕ್ಷೀಯ ವ್ಯವಸ್ಥೆಯ ಪರವಾಗಿಯೂ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಪ್ರಸ್ತಾಪಿಸಿದ್ದಾರೆ. ಆ ವಿಷಯಗಳೂ ರಾಜಕೀಯವೇ ಆಗಿದ್ದವು. ವಿರೋಧ ಪಕ್ಷಗಳ ನಾಲ್ಕು ಮುಖ್ಯಮಂತ್ರಿಗಳ ವಿರುದ್ಧ ಕಳೆದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಠರಾವು ಅಂಗೀಕರಿಸಿದ್ದೂ ರಾಜಕೀಯವೇ ಆಗಿದೆ.

ಈ ಮಂಡಳಿಯಲ್ಲಿ ಭಾಗವಹಿಸಲಿರುವ ಕೇಂದ್ರದ ಪ್ರಧಾನಮಂತ್ರಿ ಮತ್ತು ರಾಜ್ಯದ ಮುಖ್ಯ ಮಂತ್ರಿಗಳು ಸಂಬಂಧಪಟ್ಟ ರಾಜಕೀಯ ಪಕ್ಷಗಳನ್ನು ಪ್ರತಿನಿಧಿಸುತ್ತಾರೆ. ರಾಜಕೀಯ ಪಕ್ಷಗಳು ಸಮಾಜದ ವಿಭಿನ್ನ ವರ್ಗ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದರಿಂದ, ಅವುಗಳು ಆರ್ಥಿಕ ಯೋಜನೆಯನ್ನು ತಮ್ಮ ರಾಜಕೀಯ ಪ್ರಣಾಳಿಕೆಗಳಿಗನುಗುಣವಾಗಿಯೇ ರೂಪಿಸಬೇಕಾಗುವುದು. ಯೋಜನೆಯ ಗುರಿಧೋರಣೆಗಳನ್ನು ರೂಪಿಸುವುದು, ಆದ್ಯತೆಗಳನ್ನು ನಿರ್ಧರಿಸುವುದು, ಸಂಪನ್ಮೂಲಗಳ ಸಂಗ್ರಹ ವಿಧಾನಗಳನ್ನು ನಿರ್ಧರಿಸುವುದು. ಯೋಜನೆಯ ಎಲ್ಲಾ ಹಂತಗಳಲ್ಲಿ ಸಹಕಾರ ಮತ್ತು ಸಹಭಾಗಿತ್ವಗಳಿರುವುದು ರಾಜಕೀಯ ವಿಷಯಗಳೇ ಆಗಿವೆ. ರಾಜಕೀಯಕ್ಕೆ ಹೊರತಾದ ಯೋಜನೆಯೇ ಇಲ್ಲ. ಕೇವಲ ಆರ್ಥಿಕ ಸಾಮಾಜಿಕ ತಜ್ಞರೇ ಯೋಜನೆಯನ್ನು ರೂಪಿಸಲಾರರು. ಕಾರ್ಯಗತಗೊಳಿಸಲಾರರು. ಯೋಜನೆಯ ಯಶಸ್ವಿಗೆ ಮುಖ್ಯವಾದುದು ಎಲ್ಲಾ ಹಂತಗಳಲ್ಲಿ ಜನರ ಸಹಕಾರ ಮತ್ತು ಸಹಭಾಗಿತ್ವ. ಯೋಜನಾ ತಜ್ಞರ ಮತ್ತು ಆಡಳಿತ ಅಧಿಕಾರಿಗಳ ನಡುವೆ ಸಹಕಾರ, ಕೇಂದ್ರ-ರಾಜ್ಯ ಸರಕಾರಗಳೊಳಗೆ ಸಹಕಾರ, ಆಳುವ ಪಕ್ಷಗಳ ಮತ್ತು ವಿರೋಧ ಪಕ್ಷಗಳ ನಡುವೆ ಸಹಕಾರ, ಯೋಜನೆಯನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ಜನರ ಸಹಕಾರ ಅತ್ಯಗತ್ಯ. ಎಲ್ಲಾ ಯೋಜನೆಗಳಲ್ಲಿ ಇದನ್ನು ಒತ್ತಿ ಹೇಳಲಾಗುತ್ತಿದ್ದರೂ ಕಾರ್ಯಾಚರಣೆಯಲ್ಲಿ ಕಡೆಗಣಿಸಲಾಗುತ್ತಿದೆ. ಮೂವತ್ತು ಮೂರು ವರ್ಷಗಳ ಅವಧಿಯಲ್ಲಿ ಯೋಜನೆಗಳು ಸೋತಿದ್ದರೆ, ವಿದೇಶಿ ಸಹಾಯದ ಅವಲಂಬನೆ, ಸಂಪನ್ಮೂಲ ಸಂಗ್ರಹದಲ್ಲಿ ಅಸಹಾಯಕತೆ ಜನರ ಅಸಹಕಾರ ಕಂಡು ಬರುತ್ತಿದ್ದರೆ, ಆಳುವ ವರ್ಗಗಳ ರಾಜಕೀಯವೇ ಕಾರಣ.

ಯೋಜನೆಗಳು ಸೋಲುತ್ತಿರುವುದು ಚಿಂತಾಜನಕ

ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯನ್ನು ಬಹಿಷ್ಕರಿಸಿ ಹೊರಬಂದ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ಜಂಟಿ ಹೇಳಿಕೆಯಲ್ಲಿ ಪ್ರಕೃತ ಕೇಂದ್ರ-ರಾಜ್ಯ ಸಂಬಂಧಗಳು ಹದಗೆಡುತ್ತಿರುವ ಕುರಿತು ಮತ್ತು ಪಂಚವಾರ್ಷಿಕ ಯೋಜನೆಗಳು ಸೋಲುತ್ತಿರುವ ಕುರಿತು ತಮ್ಮ ತೀವ್ರ ಕಳವಳ ವ್ಯಕ್ತಗೊಳಿಸಿದ್ದಾರೆ. ಆರು ಪಂಚವಾರ್ಷಿಕ ಯೋಜನೆಗಳ ನಂತರವೂ ಭಾರತವು ಪ್ರಪಂಚದಲ್ಲಿಯೇ ಅತ್ಯಂತ ಬಡರಾಷ್ಟ್ರ. ಇಲ್ಲಿ ಆರ್ಥಿಕ ಅಭಿವೃದ್ಧಿ ತೀರಾ ಗೌಣ, ಬಡತನ, ನಿರುದ್ಯೋಗ, ಅಸಮಾನತೆ ಕಡಿಮೆಯಾಗುವ ಬದಲು ಹೆಚ್ಚುತ್ತಿವೆ, ರಾಷ್ಟ್ರೀಯ ಸ್ವಾವಲಂಬನೆಯ ಗುರಿ ಸಾಧನೆ ಹಿಂದುಳಿದಿದೆ, ವಿದೇಶಿ ಸಹಾಯದ ಅವಲಂಬನೆ ಹೆಚ್ಚುತ್ತಿದೆ. ಎಂದು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಕೇಂದ್ರದಲ್ಲಿ ಇಂದಿರಾ ಗಾಂಧಿ ಅಧಿಕಾರಾವಧಿಯು 1984 ರ ಅಂತ್ಯದಲ್ಲಿ ಕೊನೆಗೊಳ್ಳಲಿದ್ದು, ಏಳನೇ ಪಂಚವಾರ್ಷಿಕ ಯೋಜನೆಯನ್ನು ರೂಪಿಸಲು ಅದಕ್ಕೆ ಅಧಿಕಾರವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರೀಯ ಯೋಜನೆಯಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕೆಂದು ತಮ್ಮ ರಾಜ್ಯ ಸರಕಾರಗಳು ಇಷ್ಟರಲ್ಲಿಯೇ ಕೇಂದ್ರಕ್ಕೆ ಮನವಿ ಸಲ್ಲಿಸಿವೆ ಎಂದು ಹೇಳಿದ್ದಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗದ ಕಾರ್ಯಕ್ರಮ ಗ್ರಾಮೀಣ ಅಭಿವೃದ್ಧಿ ಯೋಜನೆ, ಇತ್ಯಾದಿ ರಾಷ್ಟ್ರವ್ಯಾಪಿ ಕಲ್ಯಾಣ ಕಾರ್ಯಗಳಿಗೆ ರಾಜ್ಯ ಸರಕಾರಗಳು ಶೇ 50 ರಷ್ಟು ವೆಚ್ಚ ನಿರ್ವಹಿಸುತ್ತಿದ್ದರು, ಚುನಾವಣೆ ಸಮೀಪಿಸುತ್ತಿರುವುದರಿಂದ ಇಂದಿರಾ ಕಾಂಗ್ರೆಸ್‌ನವರು ಇವುಗಳನ್ನು ತಮ್ಮ ಕೇಂದ್ರ ಸರಕಾರದ ಯೋಜನೆಗಳೆಂದು ಪ್ರಚಾರಗೊಳಿಸುತ್ತಿರುವುದನ್ನು ಈ ನಾಲ್ಕು ಮುಖ್ಯಮಂತ್ರಿಗಳು ಕಟುವಾಗಿ ಟೀಕಿಸಿದ್ದಾರೆ. ಯೋಜನೆಗಳ ಯಶಸ್ವಿಗೆ ಕೇಂದ್ರ-ರಾಜ್ಯಗಳ ಹಾಗೂ ಜನಕೋಟಿಯ ಸಹಕಾರ ಅತ್ಯಗತ್ಯ ಎಂದು ಒತ್ತಿ ಹೇಳಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಜಯಗಳಿಸಿ ಪುನಃ ಅಧಿಕಾರಕ್ಕೇರುವ ಒಂದೇ ಗುರಿಯ ಪ್ರಚಾರ, ಪಕ್ಷೋಪಭೋಗಕ್ಕಾಗಿ ಇಂದಿರಾಕಾಂಗ್ರೆಸ್ ಸರಕಾರ ಏಳನೇ ಯೋಜನೆಯ ರೂಪರೇಖೆಯನ್ನು ಸಿದ್ಧಗೊಳಿಸಿದೆ, ಅಷ್ಟೆ. ಅದಕ್ಕೆ ಹೆಚ್ಚಿನ ಆಸಕ್ತಿ ಯೋಜನೆಯಲ್ಲಿ ಇಲ್ಲ. ಆ ಕಾರಣದಿಂದಲೇ, ಇನ್ನು ಕೆಲವೇ ತಿಂಗಳುಗಳ ಅಧಿಕಾರವಿದ್ದರೂ, ಯೋಜನಾ ಮಂತ್ರಿ ಎಸ್. ಬಿ. ಚವ್ಹಾಣ್‌ರನ್ನು ತೆಗೆದು ಪಿ. ಸಿ. ಸೇಠಿಯವರನ್ನು ಅವಸರದಲ್ಲಿ ನೇಮಕ ಮಾಡಿರುವುದು. ಗೃಹಖಾತೆಯಲ್ಲಿದ್ದು ಪಂಜಾಬ್ ಸಮಸ್ಯೆಯನ್ನು ಪರಿಹರಿಸಲು ಸೋತ ಸೇಠಿಯವರು ಪಂಚವಾರ್ಷಿಕ ಯೋಜನೆಯಲ್ಲಿ ಯಶಸ್ವಿಯಾದಾರೇ ? ಇಂದಿರಾಗಾಂಧಿ ಸರಕಾರದಲ್ಲಿ ಯೋಜನಾ ಮಂತ್ರಿಗೆ ಗೌಣಸ್ಥಾನ !

ಬಡತನ ನಿವಾರಣೆ ಅಸಹಾಯಕ ಘೋಷಣೆ

ಹಿಂದಿನ ಎಲ್ಲಾ ಯೋಜನೆಗಳಂತೆ ಏಳನೇ ಯೋಜನೆಯಲ್ಲಿಯೂ ಸಾಮಾಜಿಕ ನ್ಯಾಯ, ಸಾರ್ವಜನಿಕ ಭಾಗವಹಿಸುವಿಕೆ, ಆರ್ಥಿಕ ಸಮಾನತೆ, ಉತ್ಪಾದನೆ – ಉತ್ಪಾದಕತೆ, ಮಿತಿ ಸಂತಾನ, ದಕ್ಷತೆ, ಅಧಿಕ ಲಾಭ, ಸ್ವಾವಲಂಬನೆ. ಇತ್ಯಾದಿ ಧ್ಯೇಯೋದ್ದೇಶಗಳೊಂದಿಗೇ "ಬಡತನನಿವಾರಣೆ"ಯ ಘೋಷಣೆಯನ್ನೂ ಪುನರುಚ್ಚರಿಸಲಾಗಿದೆ. ಏಕಸ್ವಾಮ್ಯ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ ಭೂಮಾಲಿಕ ಪ್ರಭುತ್ವ ಮುಂದುವರಿಯಲು "ಬಡತನ ನಿವಾರಣೆ"ಯ ಘೋಷಣೆಯನ್ನು ಪುನರುಚ್ಚರಿಸುತ್ತಲೇ ಇರಬೇಕು. ಇದೊಂದು ಅನಿವಾರ್ಯದ ಅಸಹಾಯಕತೆಯ ಘೋಷಣೆ. ಕಾರಣ ಬಡತನ—ನಿರುದ್ಯೋಗದಲ್ಲಿಯೇ ಆಳುವ ವರ್ಗಗಳ ಹಿತಾಸಕ್ತಿಗಳಿರುವುದು !

ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷರಾದ ಪಿ. ಎನ್. ಹಕ್ಸರ್ ಅವರು ಬೆಂಗಳೂರಿನಲ್ಲಿ ಇತ್ತೀಚೆಗೆ ಎರಡು ಸಮಾರಂಭಗಳಲ್ಲಿ ಮಾತನಾಡುತ್ತಾ (ಡಾ॥ ಜಿ. ವೆಂಕಟಗೌಡ, ಬೆಂಗಳೂರು ವಿಶ್ವ ವಿದ್ಯಾನಿಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕರಭಿನಂದನಾ ಭಾಷಣ ಮತ್ತು ಗೋಖಲೆ ಇನ್ಸಿಟ್ಯೂಟನಲ್ಲಿ ಏಳನೇ ಯೋಜನೆಯ ಕುರಿತಾದ ಭಾಷಣ,) ಭಾರತದಲ್ಲಿ ಇದು ತನಕ ಬಡತನದ ಕುರಿತು ಅನುಕಂಪ ಹಾಗೂ ಭಾವುಕತೆ ಪ್ರದರ್ಶಿತವಾಗಿದೆಯೇ ಹೊರತು, ಅದರ ಕುರಿತು ಗಂಭೀರವಾಗಿ ಚಿಂತಿಸಿ ಕಾರ್ಯೋನ್ಮುಖವಾಗಲಿಲ್ಲ ಎಂದು ವಿಷಾದಿಸಿದ್ದಾರೆ. ಒಂದು ದೇಶದ ಆರ್ಥಿಕ ಪ್ರಗತಿಯು ಆಧುನಿಕ ಸಮಾಜದ ಪರಿಸರದಲ್ಲಿ ಕೃಷಿ-ಕೈಗಾರಿಕಾ ವಿಪುಲ ಉತ್ಪಾದನೆಯಿಂದ ಮಾತ್ರ ಸಾಧ್ಯವೆಂದೂ, ಜಾತಿ ಮತ ಧರ್ಮಗಳಿಂದ ಆವರಿತವಾದ ಈಗಿನ ಹಳೆತು ಕೊಳೆತ ಸಮಾಜದಿಂದ ಅಸಾಧ್ಯ ಎಂದೂ ತಿಳಿಸಿದ್ದಾರೆ. ಯೋಜನೆಯ ಕುರಿತು ಮಾಜಿ ಕೇಂದ್ರ ಮಂತ್ರಿ ರಘುನಾಥ ರೆಡ್ಡಿಯವರು ಅದೇ ಸಮಾರಂಭದಲ್ಲಿ ಮಾತನಾಡುತ್ತಾ, 1980 ರಷ್ಟರಲ್ಲಿಯೇ ರೂ. 77000 ಕೋಟಿಯಷ್ಟು ಕಪ್ಪುಹಣ ಇರುವ ಮತ್ತು ರೂಪಾಯಿಯ ಬೆಲೆಯೂ ಅಪಮೌಲ್ಯವಾಗುತ್ತಿರುವ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಯೋಜನೆಯು ಭ್ರಷ್ಟಾಚಾರಕ್ಕಾಗಿದೆಯೇ ಹೊರತು ಅಭಿವೃದ್ಧಿಗಾಗಿ ಇಲ್ಲ ಎಂದು ಟೀಕಿಸಿದ್ದಾರೆ. ಪ. ಬಂಗಾಳದ ಅರ್ಥಮಂತ್ರಿ ಕಾ. ಡಾ॥ ಅಶೋಕ ಮಿತ್ರರೂ ಅದೇ ಸಮಾರಂಭದಲ್ಲಿ ಮಾತನಾಡುತ್ತಾ, ವಿದೇಶಿ ಸಾಲ ಸಹಾಯಗಳ ಅವಲಂಬನೆಯೇ ನಮ್ಮ ಸದ್ಯದ ಆರ್ಥಿಕ ದುಃಸ್ಥಿತಿ ಕಾರಣವೆಂದಿದ್ದಾರೆ. ಸ್ವಾವಲಂಬನೆ, ಉತ್ಪಾದನೆಯಲ್ಲಿ ಬಡವರ ಸಕ್ರಿಯ ಪಾತ್ರ, ಹಾಗೂ ಉದ್ಯೋಗ ಆದಾಯಗಳ ಮೂಲಕ ಅವರಿಗೆ ಯೋಗ್ಯ ಪ್ರತಿಫಲ ಹಂಚಿಕೆಯಿಂದ ಮಾತ್ರ ಕೃಷಿ-ಕೈಗಾರಿಕೆಗಳ ಉತ್ಪಾದನೆ ಹೆಚ್ಚು ಆರ್ಥಿಕ ಅಭಿವೃದ್ಧಿಯಾದೀತು ಎಂದಿದ್ದಾರೆ. (ಇಂಡಿಯನ್ ಎಕ್ಸ್‌ಪ್ರೆಸ್ : 8, 9, 10 ಆಗಸ್ಟ 1984).

1970 ರ ದಶಕದ ಪ್ರಾರಂಭದಲ್ಲಿ "ಗರೀಬಿ ಹಟಾವೋ" ಘೋಷಣೆಯಿಂದ ಅಧಿಕಾರಕ್ಕೆ ಬಂದ ಇಂದಿರಾ ಗಾಂಧಿ ಸರ್ಕಾರ, ಐದನೇ ಪಂಚವಾರ್ಷಿಕ ಯೋಜನೆಯಲ್ಲಿಯೂ (1974–79) ಬಡತನ ನಿವಾರಣೆಯ ಗುರಿಯನ್ನೇ ಜನರ ಮುಂದಿಟ್ಟಿತು. ಆದರೆ, ಅನತಿ ಕಾಲದಲ್ಲಿಯೇ ಆರ್ಥಿಕ ವ್ಯವಸ್ಥೆಯು ಹಣದುಬ್ಬರ, ಆರ್ಥಿಕ ಹಿಂಜರಿತ, ಇತ್ಯಾದಿ ಭೀಕರ ದುಃಸ್ಥಿತಿಗೊಳಗಾಯಿತು. ವೇತನ ಸ್ಥಗಿತ, ಕಡ್ಡಾಯ ಠೇವಣಿ, ಬೋನಸ್ ಕಡಿತ ದಂತಹ ನಿಷ್ಠುರ ಕ್ರಮಗಳನ್ನು ಕಾರ್ಮಿಕವರ್ಗದ ಮೇಲೆ ಜಾರಿಗೊಳಿಸಿ, ಅಂತಿಮವಾಗಿ ಆಂತರಿಕ ತುರ್ತುಪರಿಸ್ಥಿತಿಯನ್ನು ಹೇರಿ, ಸರ್ವಾಧಿಕಾರವನ್ನು ಚಲಾಯಿಸಿ, ಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದು ಕೊಂಡಿತು. ಪರಿಣಾಮವಾಗಿ ಅಧಿಕಾರ ಕಳೆದುಕೊಂಡು, 1980 ರ ಪ್ರಾರಂಭದಲ್ಲಿ ಪುನಃ ಅಧಿಕಾರಕ್ಕೆ ಬಂದ ಇಂದಿರಾ ಸರ್ಕಾರದ ಕಳೆದ ನಾಲ್ಕೂವರೆ ವರ್ಷಗಳಲ್ಲಿ, ಅಸ್ಸಾಂ, ಪಂಜಾಬ್ ಸಮಸ್ಯೆಗಳು ಬಗೆಹರಿಯದೆ ರಾಷ್ಟ್ರೀಯ ಐಕ್ಯತೆಗೆ ಅಪಾಯ ಉಂಟಾಗಿದೆ. ಕೋಮು ಗಲಭೆಗಳು ಹೆಚ್ಚುತ್ತಿವೆ. ರಾಷ್ಟ್ರೀಯ ಭದ್ರತಾ ಶಾಸನ, ಅವಶ್ಯಕ ಸೇವಾ ಕಾಯಿದೆ, ಕಾರ್ಮಿಕ ಸಂಘಟನೆಗಳು ಮತ್ತು ಕೈಗಾರಿಕಾ ವಿವಾದಗಳ ಕಾಯಿದೆಗಳ ತಿದ್ದುಪಡಿಗಳು, ಇತ್ಯಾದಿ ಕ್ರಮಗಳ ಮೂಲಕ ಶ್ರಮಿಕ ವರ್ಗದ ಹಕ್ಕು

ಎಸ್. ಎಫ್. ಐ. ಬೇಡಿಕೆಗೆ ಸಿ.ಪಿ.ಐ. (ಎಂ), ಬೆಂಬಲ

ಜಿಲ್ಲೆಯ ಸರಕಾರಿ ಶಾಲಾ ಕಾಲೇಜುಗಳಲ್ಲಿ ಕೊರತೆ ಇರುವ ಅಧ್ಯಾಪಕರ ಸ್ಥಾನವನ್ನು ಭರ್ತಿ ಮಾಡಲು ಒತ್ತಾಯಿಸಿ ಎಸ್.ಎಫ್.ಐ. ವಿದ್ಯಾರ್ಥಿಗಳು ತಾ|| 13 ರಿಂದ ಜಿಲ್ಲಾಧಿಕಾರಿಗಳ ಕಛೇರಿಯೆದಿರು ಸರದಿ ನಿರಶನ ಸತ್ಯಾಗ್ರಹ ಆರಂಭಿಸಿದ್ದಾರೆ. ಅನೇಕ ಅನೇಕ ಸರಕಾರಿ ಶಾಲಾ, ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆಯಿಂದಾಗಿ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತಿವೆ. ಇನ್ನೊಂದೆಡೆ ಜಿಲ್ಲೆಯಲ್ಲಿ ಸಾವಿರಾರು ಮಂದಿ ನಿರುದ್ಯೋಗಿ ಪದವೀಧರರೂ ಟಿ.ಸಿ.ಎಚ್. ತರಬೇತಿ ಹೊಂದಿದವರೂ ಕೆಲಸಕ್ಕಾಗಿ ಅಲೆದಾಡುತ್ತಿದ್ದಾರೆ.

ಆದುದರಿಂದ ಸರಕಾರ ಕೂಡಲೇ ಈ ಬಗ್ಗೆ ಯೋಗ್ಯ ಕ್ರಮ ವಹಿಸಿ ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಸಿಪಿಐ (ಎಂ) ದ. ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ ಆರ್. ಶ್ರೀಯಾನರು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಬಾಗೇಪಲ್ಲಿಯಲ್ಲಿ ಹುತಾತ್ಮರ ದಿನಾಚರಣೆ

1980 ರಲ್ಲಿ ರಾಜ್ಯಾದ್ಯಂತ ಬೆಳೆದು ಬಂದ ರೈತರ ಹೋರಾಟದ ಅಂಗವಾಗಿ ಕೋಲಾರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಆಗಸ್ಟ ತಿಂಗಳು 7ರಂದು ರೈತರು ಮತ್ತು ಕೃಷಿ ಕಾರ್ಮಿಕರು ತಮ್ಮ ನ್ಯಾಯ ಯುತ ಬೇಡಿಕೆಗಳಿಗಾಗಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಮಾರ್ಕ್ಸವಾದಿ ಕಮ್ಯೂನಿಸ್ಟ ಪಕ್ಷಗಳ ನೇತೃತ್ವದಲ್ಲಿ ಬೃಹತ್ ಮೆರವಣಿಗೆಯನ್ನು ಏರ್ಪಡಿಸಿದಾಗ ಮೆರವಣಿಗೆಯ ಮೇಲೆ ಪೋಲೀಸರು ಗುಂಡು ಹಾರಿಸಿದ ಕಾರಣ ಕಾ ದದ್ದಿನ್ನಪ್ಪ ಮತ್ತು ಕಾ. ಆದಿನಾರಾಯಣ ರೆಡ್ಡಿಯವರು ಅಸುನೀಗಿದರು.

ಆ ಹತ್ಯಾಕಾಂಡದ ನಾಲ್ಕನೇ ಸ್ಮರಣ ದಿನಾಚರಣೆಯನ್ನು 7-8-84 ರಂದು ಬಾಗೇಪಲ್ಲಿಯಲ್ಲಿ ಸ್ಫೂರ್ತಿದಾಯಕವಾಗಿ ನಡೆಸಲಾಯಿತು.

ಅಂದು ನಡೆದ ಸಾರ್ವಜನಿಕಸಭೆಯ ಅಧ್ಯಕ್ಷತೆಯನ್ನು ಮಾರ್ಕ್ಸವಾದಿ ಕಮ್ಯೂನಿಸ್ಟ ಪಕ್ಷದ ಶಾಸಕರಾದ ಕಾ. ಎ. ವಿ. ಅಪ್ಪಸ್ವಾಮಿ ರೆಡ್ಡಿಯವರು ವಹಿಸಿದ್ದರು ಈ ಸಭೆಯನ್ನು ಉದ್ದೇಶಿಸಿ. ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಅಬ್ದುಲ್ ನಜೀರ್ ಸಾಬ್ ರವರು ಮಾತನಾಡಿದರು.

ಹೋರಾಟದಲ್ಲಿ ಪ್ರಾಣ ತೆತ್ತ ಹುತಾತ್ಮರ ಧ್ಯೇಯೋದ್ದೇಶಗಳಿಗಾಗಿ ಇಂದು ಕೂಡ ಜನರು ಸಂಘಟಿತ ಹೋರಾಟವನ್ನು ನಡೆಸಬೇಕೆಂದರು.

ಜಿ. ವಿ. ಶ್ರೀರಾಮ ರೆಡ್ಡಿಯವರೂ, ಬಿ. ಕೃಷ್ಣಮೂರ್ತಿಯವರೂ ಹುತಾತ್ಮರದಿನದ ಮಹತ್ವದ ಕುರಿತು ಭಾಷಣ ಮಾಡಿದರು.

ಉಳ್ಳಾಲ ಗ್ರಾಮದ ರೈತರ ಸಭೆ

ತಾ. 13-8-84 ರಂದು ಉಳ್ಳಾಲ ಗ್ರಾಮದ ರೈತರ ಸಭೆಯು ಕೋಟ್ಯಾರದಲ್ಲಿ ಜರುಗಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀಯುತ ಗಂಗಾಧರ ಶೆಟ್ಟಿ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀಯುತ. ವಿಶ್ವನಾಥ ಬಂಗೇರರು ಸ್ವಾಗತಿಸುತ್ತಾ ರೈತರ ಮುಂದಿರುವ ಸಮಸ್ಯೆಗಳನ್ನು ಹಾಗೂ ಪ್ರಾಂತ ರೈತ ಸಂಘದ ತೀರ್ಮಾನದಂತೆ ಗ್ರಾಮ ಸಮಿತಿಗಳ ರಚನೆಯ ಮೂಲಕ ರೈತ ಸಂಘಟನೆಯನ್ನು ಬಲಗೊಳಿಸುವ ಅವಶ್ಯಕತೆಯನ್ನು ವಿವರಿಸಿದರು.

ಬಳಿಕ ತಾಲೂಕು ರೈತ ಸಂಘದ ಕಾರ್ಯದರ್ಶಿ ಶ್ರೀ ರಾಮಚಂದ್ರ ಉಚ್ಚಿಲ್ ಕೋಟೆಕಾರು ರೈತ ಸಂಘದ ಅಧ್ಯಕ್ಷ ಯು ಪಿ. ಡಿಸೋಜ-ಇವರು ಮಾತನಾಡಿದರು. ಬಳಿಕ 15 ಮಂದಿಯ ಉಳ್ಳಾಲ ಗ್ರಾಮ ರೈತ ಸಂಘದ ಸಮಿತಿಯನ್ನು ರಚಿಸಿ, ಶ್ರೀ ಗಂಗಾಧರ ಶೆಟ್ಟಿ (ಅಧ್ಯಕ್ಷ) ಶ್ರೀ ವಿಶ್ವನಾಥ ಬಂಗೇರ(ಕಾರ್ಯದರ್ಶಿ) ದಯಾನಂದ (ಉಪಾಧ್ಯಕ್ಷ) ಯು. ವಾಸು (ಜೊತೆ ಕಾರ್ಯದರ್ಶಿ)ಯವರುಗಳು ಆಯ್ಕೆಯಾದರು.

ಸಿಂಧನೂರು

ಡ್ರೈವರುಗಳ ಸಂಘ ರಚನೆ

25—7—84ರಂದು ಸಿಂಧನೂರು ತಾಲೂಕು ಡ್ರೈವರ್ಸ್ ಅಂಡ್ ಕ್ಲೀನರ್ಸ್ ಯೂನಿಯನ್ ರಚಿಸಲ್ಪಟ್ಟಿದ್ದು ಕೆಳಕಂಡವರು ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರು ಖಾಜಾಸಾಬ್.

ಉಪಾಧ್ಯಕ್ಷರುಗಳು. 1) ಮನಸಿ 2) ಸೈಯದ್ ಹುಸೇನ್ 3) ಭೀಮನಗೌಡ ಪ್ರಧಾನ ಕಾರ್ಯದರ್ಶಿ ಸಿ.ಎಸ್. ಹಿರೇಮಠ್ ಕಾರ್ಯದರ್ಶಿಗಳು 1) ಮಹ್ಮದ್ ಹುಸೇನ್ 2) ಮಸಾಬಿ 3) ಖಾಸೀಮ ಖಜಾಂಚಿ ಜಾಫರ್ ಸಾಬ್ ಜೊತೆಗೆ 17 ಜನರ ಕಾರ್ಯಕಾರಿ ಸಮಿತಿ ರಚಿಸಲ್ಪಟ್ಟಿದೆ.

ಗಳನ್ನು ಕಸಿದು ಕೊಳ್ಳಲಾಗುತ್ತಿದೆ. ವಿರೋಧ ಪಕ್ಷಗಳಿಗೂ ಮತ್ತು ಅವುಗಳು ಅಧಿಕಾರದಲ್ಲಿರುವ ರಾಜ್ಯ ಸರ್ಕಾರಗಳಿಗೂ ಭಾರೀ ಕಿರುಕುಳ ಕೊಡಲಾಗುತ್ತಿದೆ. ಅಧ್ಯಕ್ಷೀಯ ಪದ್ಧತಿಯನ್ನು ಪ್ರತಿಪಾದಿಸಲಾಗುತ್ತಿದ್ದು, ಪುನಃ ಸರ್ವಾಧಿಕಾರಿ ಪ್ರಭುತ್ವವನ್ನು ಹೇರಲು ತಯಾರಿ ನಡೆಯುತ್ತಿದೆ. ವಿದೇಶಿ ಸಾಲ ಸಹಾಯ ಪಡೆಯುವುದರಲ್ಲಿ ಉದಾರ ನೀತಿ ಅನುಸರಿಸುವುದರಿಂದ, ಬಹು ರಾಷ್ಟ್ರೀಯ ಸಂಸ್ಥೆಗಳು ವಿಶ್ವಬ್ಯಾಂಕು ಮತ್ತು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ, ಅಮೇರಿಕದ ಗೂಢಚಾರಿ ಸಂಸ್ಥೆ ಇವುಗಳ ಕೈವಾಡಗಳು ನಮ್ಮ ದೇಶದ ಆಂತರಿಕ ವಿಷಯಗಳಲ್ಲಿ ಹೆಚ್ಚುತ್ತಿವೆ. ರಾಷ್ಟ್ರೀಯ ಭದ್ರತೆಗೆ ತೀವ್ರ ಅಪಾಯ ಉಂಟಾಗಿದೆ.

ಈ ಹಿನ್ನೆಲೆಯಲ್ಲಿ "ಬಡತನ ನಿವಾರಣೆ" ಯ ಏಳನೇ ಯೋಜನೆಯು ಎಷ್ಟು ಸಮರ್ಪಕವಾದದು ?

ತಪ್ಪು ಲೆಕ್ಕಾಚಾರ

ಏಳನೇ ಯೋಜನೆಯ ಧ್ಯೇಯೋದ್ದೇಶಗಳ ಕರಡು ಪ್ರತಿಯಲ್ಲಿ, ಏಳನೇ ಯೋಜನೆಯ ಅವಧಿಯಲ್ಲಿ ಬಡತನ ರೇಖೆಯ ಕೆಳಗಿನ ಜನ ಸಂಖ್ಯೆ ಶೇ 37 ರಿಂದ ಶೇ 23 ಕ್ಕೆ ಇಳಿಸಲಾಗುವುದೆಂದೂ, 8 ನೇ ಯೋಜನೆಯ ಅಂತ್ಯದಲ್ಲಿ (1994-95) ಶೇ 10 ಕ್ಕೆ ಇಳಿಸಲಾಗುವುದೆಂದೂ, ಹೇಳಲಾಗಿದೆ. 6ನೇ ಯೋಜನೆಯಲ್ಲಿ ಬಡತನ ರೇಖೆಗಿಂತ ಕೆಳಗಿನ ಜನಸಂಖ್ಯೆ ಶೇ 48ರಿಂದ ಶೇ 37 ಕ್ಕೆ ಇಳಿಸಲಾಗಿದೆ ಎಂದೂ ಹೇಳಲಾಗಿದೆ. ಇದು ಹೇಗೆ ಸಾಧ್ಯ ?

ಆರನೇ ಪಂಚ ವಾರ್ಷಿಕ ಯೋಜನೆಯಲ್ಲಿಯೇ ತಿಳಿಸಿರುವಂತೆ, ಹಿಂದಿನ ಐದು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿಯೂ ಬಡತನರೇಖೆಯ ಕೆಳಗಿನ ಜನಸಂಖ್ಯೆಯನ್ನು ಮೇಲೆತ್ತಲಿಕ್ಕೆ ಆಗಲಿಲ್ಲ. ಒಟ್ಟು ಜನಸಂಖ್ಯೆಯಲ್ಲಿ ಅವರ ಶೇಕಡಾಂಶವು ಹೆಚ್ಚುತ್ತಲೇ ಇತ್ತು. ಹಾಗಾದರೆ. ಆರನೇ ಯೋಜನೆಯಲ್ಲಿ ಒಮ್ಮೆಗೇ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಜನ ಸಂಖ್ಯೆಯ ಶತಾಂಶ ಕಡಿಮೆ ಹೇಗಾಯಿತು ? 1979-80 ರಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಜನ ಸಂಖ್ಯೆ 339 ಮಿಲಿಯ ಎಂದು ಅಂದಾಜು ಮಾಡಲಾಗಿತ್ತು (273 ಮಿ. ಗ್ರಾಮೀಣ ಮತ್ತು 66 ಮಿ. ನಗರ ಪ್ರದೇಶದ ಬಡಜನರು) 1981-82 ರಷ್ಟರಲ್ಲಿ, ಇವರ ಸಂಖ್ಯೆ 316 ಮಿಲಿಯಕ್ಕೆ ಹೇಗೆ ಇಳಿಯಿತು. 2 ಮಿ. ಗ್ರಾಮೀಣ ಮತ್ತು 2 ಮಿಲಿಯ ನಗರ ಪ್ರದೇಶಗಳ ಬಡಜನರು ಎರಡೇ ವರ್ಷಗಳಲ್ಲಿ ಹೇಗೆ ಬಡತನ ರೇಖೆಗಿಂತ ಮೇಲೆತ್ತಲ್ಪಟ್ಟರು ? ಯೋಜನಾ ಆಯೋಗ ಕೆಲವು ಊಹಾಪೋಹಗಳಿಂದ, ಪ್ರತ್ಯಕ್ಷ ಅನುಭವದಿಂದಲ್ಲ. ಬಡತನ ನಿವಾರಣೆಯಾಗುತ್ತಿದೆ ಎಂದು ವಾದಿಸುತ್ತಿದೆ. ಆಯೋಗದ ಲೆಕ್ಕಾಚಾರಗಳು ತಪ್ಪು ಎಂದು ತೋರಿಸುವುದು ಕಷ್ಟವಲ್ಲ.

1. ಆರ್ಥಿಕ ಅಭಿವೃದ್ಧಿಯ ದರವು ಆರನೇ ಯೋಜನೆಯಲ್ಲಿ ಶೇ 5 ರಷ್ಟಾಗಿದ್ದು, ಜನಸಂಖ್ಯಾ ಹೆಚ್ಚಳದ ದರಕ್ಕಿಂತ ಹೆಚ್ಚಾಗಿದೆ ಇದರ ಪ್ರಯೋಜನದಿಂದಾಗಿ, ಬಡತನ ರೇಖೆಯ ಕೆಳಮಟ್ಟದಲ್ಲಿರುವ ಜನ ಸಂಖ್ಯೆ ಕಡಿಮೆ ಆಗಿದೆ ಎಂದು ಒಂದನೇ ವಾದ. ಆದರೆ, ಅಭಿವೃದ್ಧಿ ದರದ ಏರಿಕೆಯನ್ನು 1979-80ರ ಮೂಲ ವರ್ಷದಿಂದ ಪರಿಗಣಿಸಲಾಗಿದೆ ಆ ವರ್ಷ ಮಳೆ ಬೆಳೆಯಲ್ಲಿ ಬಹಳ ಇಳಿಮುಖವಾಗಿತ್ತು. ಯೋಜನ ಆಯೋಗದ ಸಮೀಕ್ಷೆಯಂತೆಯೇ ಆ ವರ್ಷ ಕೃಷಿ ಉತ್ಪನ್ನ ಹಿಂದಿನ ವರ್ಷಕ್ಕಿಂತ ಶೇ 17 ರಷ್ಟು ಕಡಿಮೆಯಾಗಿತ್ತು. ಅಭಿವೃದ್ಧಿ ದರ ಏರಿಕೆಯ ಗಣನೆಗೆ ಆ ವರ್ಷ ಯೋಗ್ಯವಲ್ಲ. 1978-79 ಮಳೆ ಬೆಳೆಯ ಉತ್ತಮ ವರ್ಷ. ಅಲ್ಲಿಂದ ಇಲ್ಲಿಯತನಕದ ಅಭಿವೃದ್ಧಿಯನ್ನು ಗಮನಿಸಿದರೆ, 1983-84 ರಲ್ಲಿ ಕೃಷಿ ಉತ್ಪನ್ನವು 153 ಮಿ. ಟನ್‌ಗಳ ಹೊಸ ದಾಖಲೆಗೆ ಏರಿದ್ದರೂ, ವಾರ್ಷಿಕ ಸರಾಸರಿ ಅಭಿವೃದ್ಧಿಯ ದರ ಶೇ ੨.2 ರಷ್ಟೆ ಇರುವುದನ್ನು ಗಮನಿಸಬಹುದು.

2. ಉತ್ಪಾದನೆ ಹೆಚ್ಚಾದಂತೆ, ವಿತರಣೆಯೂ ಸಮರ್ಪಕವಾಗುವುದು, ಬಡತನ ನಿವಾರಣೆಯಾಗುವುದು ಎಂಬ ಯೋಜನಾ ಆಯೋಗದ ಊಹೆಯೂ ಸತ್ಯಕ್ಕೆ ದೂರ. ಆರ್ಥಿಕ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯ ವಿತರಣೆಯ ಸೂಚಿಯು ಉದ್ಯೋಗಾವಕಾಶಗಳ ಹೆಚ್ಚಳದಲ್ಲಿದೆ ರಾಷ್ಟ್ರೀಯ ಗ್ರಾಮೀಣ ಔದ್ಯೋಗಿಕ ಕಾರ್ಯಕ್ರಮ ಮತ್ತು ಗ್ರಾಮೀಣ ಅಭಿವೃದ್ಧಿ ಯೋಜನೆ ಇವುಗಳಿಂದ ಉದ್ಯೋಗಾವಕಾಶಗಳು ಹೆಚ್ಚಾಗಿ, 1979-80 ರಿಂದ ಇನ್ನೂ 34 ಮಿಲಿಯ ಜನರು ಬಡತನ ರೇಖೆಗಿಂತ ಮೇಲಕ್ಕೆ ಎತ್ತಲ್ಪಟ್ಟಿದ್ದಾರೆ ಎಂದು ಯೋಜನಾ ಆಯೋಗದ ಊಹಾಪೋಹದ ವಾದ. ಆದರೆ. ಈ ಯೋಜನೆಗಳಿಂದ 1979-79 ರಷ್ಟರಲ್ಲಿಯೇ 400 ಮಿ. ಮಾನವ ದಿನಗಳ ಗ್ರಾಮೀಣ ಉದ್ಯೋಗಾವಕಾಶಗಳಾಗಿವೆ ಎಂದು ತಿಳಿದು ಬಂದಿದೆ. ಮುಂದಿನ ವರ್ಷಗಳಲ್ಲಿ ಈ ಮಟ್ಟವನ್ನು ಮೀರಲೇ ಇಲ್ಲ. 1981-82 ರಲ್ಲಿ 355 ಮಿ. ಮಾನವ ದಿನಗಳ ಗ್ರಾಮೀಣ ಉದ್ಯೋಗಾವಕಾಶಗಳಾಗಿವೆ, 1982-83 ರಲ್ಲಿ 350 ಮಿ. ಮಾನವ ದಿನಗಳು ಮತ್ತು 1983-84 ರಲ್ಲಿ 300 ಮಿ. ಮಾನವ ದಿನಗಳಾಗಿವೆ. ದಿನಕೂಲಿಯಲ್ಲಿ ಆಹಾರಧಾನ್ಯಗಳ ಅಂಶವೂ ಕಡಿಮೆಯಾಗುತ್ತಿದೆ. ಹಣ ದುಬ್ಬರದ ಕಾಲದಲ್ಲಿ ವೇತನ ಮಟ್ಟ, ಜೀವನಮಟ್ಟ ಕಡಿಮೆಯಾಗುವುದೇ ಹೊರತು ಹೆಚ್ಚುವುದಿಲ್ಲ.

3. ಏಳನೇ ಯೋಜನೆಯಲ್ಲಿ ರೂ 3, 20, 000 ಕೋಟಿ ಬಂಡವಾಳ ಹೂಡುವಿಕೆ ಇರುವುದು. ಅದರಲ್ಲಿ ರೂ 1,80,000 ಕೋಟಿ, ಶೇ 46 ರಷ್ಟು ಸಾರ್ವಜನಿಕ ಕ್ಷೇತ್ರದಲ್ಲಿ ಬಂಡವಾಳ ಹೂಡುವಿಕೆ. ಬಂಡವಾಳ ಹೂಡುವಿಕೆಯಲ್ಲಿ ಏಳನೇ ಯೋಜನೆಯಲ್ಲಿ ನಾಲ್ಕನೇ ಐದನೇ ಮತ್ತು ಆರನೇ ಯೋಜನೆಗಳ ಒಟ್ಟು ಬಂಡವಾಳ ಹೂಡೂವಿಕೆ (ರೂ 2, 45, 096 ಕೋಟಿ) ಗಿಂತಲೂ ಹೆಚ್ಚಾಗಿದೆ. ಆದರೆ, ಬೆಲೆ ಏರಿಕೆ, ಹಣ ದುಬ್ಬರ, ವಿದೇಶಿ ವ್ಯಾಪಾರದ ಕೊರತೆ, ಕಪ್ಪು ಹಣ, ವಿದೇಶಿ ಸಾಲದ ಭಾರದಿಂದಾಗಿ ಯೋಜನೆಯಲ್ಲಿ ತೊಡಗಿಸಿದ ಬಂಡವಾಳವೆಲ್ಲವೂ ಉತ್ಪಾದನೆಗೇ ವ್ಯಯವಾಗಲಾರದು, ಉತ್ಪಾದನೆ ಹೆಚ್ಚಿದರೂ ಸಾಮಾಜಿಕ-ಆರ್ಥಿಕ ತಳಪಾಯ ಬದಲಾವಣೆ ಆಗದೆ ನ್ಯಾಯ ವಿತರಣೆ ಆಗಲಾರದು. ಆರ್ಥಿಕ ಅಭಿವೃದ್ಧಿ ಆದರೂ ಪ್ರಾದೇಶಿಕ ಅಸಮಾನತೆ ನೀಗಲಾರದು. ಬಡತನ, ನಿರುದ್ಯೋಗ ಹೋಗಲಾರದು ಮೂವತ್ತ ಮೂರು ವರ್ಷಗಳ ಬಂಡವಾಳಶಾಹಿ ಪದ್ಧತಿಯ ಆರ್ಥಿಕ ಅಭಿವೃದ್ಧಿಯ ಅನುಭವ ಮುಂದಿನ ವರ್ಷಗಳಲ್ಲಿ ಸುಳ್ಳಾಗದು.

ಮೂಲಭೂತ ಬದಲಾವಣೆ

4. ಯೋಜನೆಯ ಆಯೋಗ ಮತ್ತಿತರ ತಜ್ಞರು "ಬಡತನ" ಮಟ್ಟದ ಅರ್ಥವ್ಯಾಪ್ತಿಯನ್ನೇ ಮರು ಪರಿಶೀಲಿಸಿದ್ದಾರೆ! ಆಗ ಯೋಜನೆಯ ಕಾಗದದಲ್ಲಿ ಬಡತನ ನಿವಾರಣೆಯಾದಂತಾಗುವುದು ! ಬಂಡವಾಳ ಹೂಡುವುದು, ಕಾರ್ಖಾನೆ, ಅಣೆಕಟ್ಟುಗಳನ್ನು ಕಟ್ಟುವುದಷ್ಟೇ ಆರ್ಥಿಕ ಯೋಜನೆ ಆಗಲಾರದು. ಆದರಿಂದ ಟಾಟಾ. ಬಿರ್ಲಾ, ಗೋಯಂಕಾ ಕುಟುಂಬಗಳ ಆಸ್ತಿ ಆದಾಯಗಳಷ್ಟೇ ಹೆಚ್ಚಾದಾವು. ಆರ್ಥಿಕ ಯೋಜನೆಯು ಭೂ ಸುಧಾರಣೆ ಮರುವಿತರಣೆ, ಕೈಗಾರಿಕೆಗಳ ರಾಷ್ಟ್ರೀಕರಣ, ವಿದೇಶಿ ಸಾಲ ಸಹಾಯ ರದ್ಧತಿ, ಸ್ವಾವಲಂಬನೆ, ಪೂರ್ಣ ಉದ್ಯೋಗಾವಕಾಶ, ಹಾಗೂ ವಿತರಣೆಯಲ್ಲಿ ಜನಕೋಟಿಗೆ ನ್ಯಾಯ ಪಾಲು, ಇತ್ಯಾದಿ ಮೂಲಭೂತ ಬದಲಾವಣೆಗಳನ್ನು ಮಾಡಿಕೊಂಡು ಜನರ ಜೀವನಾವಶ್ಯಕದ ಆದ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಯೋಜನೆ ತಯಾರಿಸಬೇಕು. ಜನರು ಸಕ್ರಿಯವಾಗಿ ಅದರಲ್ಲಿ ಭಾಗವಹಿಸಬೇಕು.

ರೈತ ಸಂಘದ ಕಾರ್ಯಕರ್ತರಿಗೆ

ತಾಲೂಕಿನಾದ್ಯಂತ ತರಬೇತಿ ಶಿಬಿರ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನಲ್ಲಿ ಈಗಾಗಲೇ ಗ್ರಾಮಮಟ್ಟದ ರೈತ ಸಂಘ ಕಾರ್ಯಕರ್ತರುಗಳಿಗೆ ನಾಲ್ಕು ತರಬೇತಿ ಶಿಬಿರಗಳನ್ನು ನಡೆಸಲಾಗಿದೆ. ಇವುಗಳಲ್ಲಿ ಸುಮಾರು ನೂರ ಮೂವತ್ತು ಮಂದಿ ಪಾಲ್ಗೊಂಡಿದ್ದರು. ತರಬೇತಿ ಶಿಬಿರಗಳೆಲ್ಲವೂ ಕಾ. ಎಂ. ಕೆ. ಭಟ್ ಮತ್ತು ಕಾ. ಯು. ಜನಾರ್ಧನ ನಾಯರ್ ಅವರ ನಿರ್ದೇಶನದಲ್ಲಿ ನಡೆದುವು. ಎರಡೆರಡು ದಿನ ನಡೆದ ಈ ತರಬೇತಿ ಶಿಬಿರಗಳಲ್ಲಿ ಗ್ರಾಮೀಣ ಪರಿಸ್ಥಿತಿ ಹಿಂದೆ ಮತ್ತು ಇಂದು, ಹಳ್ಳಿಗಳಲ್ಲಿನ ವರ್ಗಗಳು, ನಮ್ಮ ರೈತ ಸಂಘಟನೆ ಯಾರಿಗಾಗಿ ಇದೆ. ಬೇರೆ ಬೇರೆ ರೈತ ಸಂಘಗಳು ಮತ್ತು ಅವುಗಳ ಧೋರಣೆ, ಅಖಿಲ ಭಾರತ ಕಿಸಾನ್ ಸಭಾದ ಧೋರಣೆ, ರೈತ ಕಾರ್ಮಿಕರ ರೊಳಗಿನ ಸಖ್ಯತೆ, ಸಂಘಟನೆ ಮತ್ತು ಹೋರಾಟಗಳನ್ನು ಗ್ರಾಮ ಮಟ್ಟದಿಂದಲೇ ಕಟ್ಟಿ ಬೆಳೆಸುವ ಅವಶ್ಯಕತೆ ಮತ್ತು ವಿಧಾನ, ಸಮಿತಿಗಳು ಮತ್ತು ಮುಖಂಡತ್ವ, ಈ ಮೊದಲಿನ ಅನುಭವಗಳು ಮತ್ತು ಎದುರಿಸುತ್ತಿರುವ ಸಮಸ್ಯೆಗಳು, ರಾಜಕೀಯ ಹಾಗೂ ವರ್ಗ ಪ್ರಜ್ಞೆಯನ್ನು ಬೆಳೆಸುವುದು ಇವೇ ಮೊದಲಾದ ವಿಚಾರಗಳ ಬಗ್ಗೆಯೂ ಇಂದಿನ ರಾಜಕೀಯ ಪರಿಸ್ಥಿತಿ ಬಗ್ಗೆಯೂ ವಿವರಣೆಗಳನ್ನು ನೀಡಲಾಯಿತು.

ಜುಲೈ 24, 25 ರಂದು ಕೊಲ್ಲಮೊಗರು, ಹರಿಹರ ಪಳ್ಳತಡ್ಕ, ನಾಲ್ಕೂರು, ಗುತ್ತಿಗಾರು, ದೇವಚಳ್ಳ ಮತ್ತು ಮಡಪ್ಪಾಡಿ ಗ್ರಾಮದ ಕಾರ್ಯಕರ್ತರುಗಳಿಗೆ ದೇವಚಳ್ಳ ಗ್ರಾಮದಲ್ಲಿ ತರಬೇತಿ ಶಿಬಿರ ನಡೆಯಿತು.

ಸಂಪಾಜೆ, ಅರಂತೋಡು ಮತ್ತು ತೊಡಿಕಾನ ಗ್ರಾಮದ ಕಾರ್ಯಕರ್ತರುಗಳಿಗೆ ಆಗಸ್ಟ್ 11, 12 ರಂದು ತೊಡಿಕಾನದಲ್ಲಿ ತರಬೇತಿ ಶಿಬಿರ ನಡೆಯಿತು. ಸುಮಾರು ಮೂವತ್ತು ಮಂದಿ ಭಾಗವಹಿಸಿದ್ದ ಈ ಶಿಬಿರವು ಹಿರಿಯ ಹಾಗೂ ರೈತ ಸಂಘದ ತಾಲೂಕು ಸಮಿತಿ ಉಪಾಧ್ಯಕ್ಷ ಕಾ. ಮೆತ್ತಡ್ಕ ರಾಮಯ್ಯ ಗೌಡ ಅವರು ಧ್ವಜಾರೋಹಣ ಮಾಡುವುದರೊಂದಿಗೆ ಪ್ರಾರಂಭವಾಯಿತು.

ನೆಲ್ಲೂರು ಕೆಮ್ರಾಜೆ, ಮರ್ಕಂಜ, ಅಮರ ಪಡ್ನೂರು, ಅಮರ ಮೂಡ್ನೂರು, ಉಬರಡ್ಕ ಮಿತ್ತೂರು ಮತ್ತು ಆಸುಪಾಸಿನ ಇನ್ನೂ ಮೂರು ಗ್ರಾಮಗಳಿಗೆ ಸೇರಿದ ಸುಮಾರು ಮೂವತ್ತೈದು ಮಂದಿ ಕಾರ್ಯಕರ್ತರಿಗೆ ದೊಡ್ಡತೋಟದಲ್ಲಿ ತರಬೇತಿ ಶಿಬಿರ ನಡೆಯಿತು. ಆಗಸ್ಟ್ 13,14 ರಂದು ನಡೆದ ಈ ಕಾರ್ಯಕ್ರಮವು ಹಿರಿಯ ಕಾರ್ಯಕರ್ತ ಕಾ. ಹುಕ್ರ ಮೇರ ಎಂಬುವರಿಂದ ಧ್ವಜಾರೋಹಣ ನಡೆಸುವುದರೊಂದಿಗೆ ಪ್ರಾರಂಭವಾಯಿತು.

ಕನಕಮಜಲು, ಜಾಲ್ಸೂರು, ಅಜ್ಜಾವರ, ಆಲೆಟ್ಟಿ ಮತ್ತು ಸುಳ್ಯ ಗ್ರಾಮದ ಸುಮಾರು ಮೂವತ್ತು ಮಂದಿ ಕಾರ್ಯಕರ್ತರುಗಳಿಗೆ ಸುಳ್ಯದಲ್ಲಿ ತರಬೇತಿ ಶಿಬಿರವನ್ನು ನಡೆಸಲಾಯಿತು. ತಾಲೂಕಿನ ಇನ್ನೂ ಎರಡು ಮೂರು ಕಡೆ ಇದೇ ರೀತಿ ಕ್ಲಾಸುಗಳನ್ನು ನಡೆಸಿ ಒಟ್ಟು ಇನ್ನೂರು ಮಂದಿ ಕಾರ್ಯಕರ್ತರುಗಳನ್ನು ಇವುಗಳಲ್ಲಿ ಭಾಗವಹಿಸುವಂತೆ ಮಾಡುವ ಗುರಿಯನ್ನಿಡಲಾಗಿದೆ.

○

ಪೋಲೀಸ್ ಅಧಿಕಾರಿಗಳ ವಿರುದ್ಧ ಪ್ರತಿಭಟನೆ

ಕಳೆದ ವಾರ ನಾವು ಪ್ರಕಟಿಸಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಎಂಬ ಗ್ರಾಮದಲ್ಲಿ ಬಡ ಕೃಷಿ ಕೂಲಿಗಾರ ಮಹಾಲಿಂಗ ಮಣಿಯಾಣಿ ಎಂಬುವನಿಗಾದ ಮೇಲಧಿಕಾರಿಗಳ ಮೋಸದ ವಿರುದ್ಧ ಉಗ್ರ ಪ್ರತಿಭಟನೆ ನಡೆಸಲು ಸುಳ್ಯ ಮತ್ತು ಪುತ್ತೂರಿನ ಸಿ. ಪಿ. ಐ. (ಎಂ) ಸಮಿತಿಗಳು ನಿರ್ಣಯಿಸಿ ಇದನ್ನು ಪ್ರತಿಭಟಿಸಲು 17-8-84 ರಂದು ಸುಳ್ಯ ಮತ್ತು ಪುತ್ತೂರು ನಗರದಲ್ಲಿ ಜಡಿ ಮಳೆಯನ್ನೂ ಲೆಕ್ಕಿಸದೆ ಪ್ರತಿಭಟನಾ ಕಾರ್ಯಕ್ರಮ ನಡೆಯಿತು. ಬಡ ಜನತೆಯ ಒಗ್ಗಟ್ಟು ಮತ್ತು ಹೋರಾಟದ ಮನೋಭಾವನೆಯನ್ನು ತಿಳಿದುಕೊಂಡ ಪೋಲೀಸ್ ಮೇಲಧಿಕಾರಿಗಳು ಕೂಡಲೇ ಮಹಾಲಿಂಗ ಮಣಿಯಾಣಿಯ ಮನೆ ಮುರಿದವರ ಮೇಲೆ ಚಾರ್ಜ್ ಶೀಟು ಹಾಕುವುದಾಗಿ ಭರವಸೆ ಇತ್ತುದರಿಂದ ಠಾಣೆಗಳೆದುರು ಸತ್ಯಾಗ್ರಹ ಕಾರ್ಯಕ್ರಮವನ್ನು ಮುಂದೂಡಿ, ಪ್ರತಿಭಟನಾ ಮೆರವಣಿಗೆ, ಸಭೆಗಳನ್ನು ನಡೆಸಲಾಯಿತು.

ಬಹಿರಂಗ ಸಭೆಯನ್ನುದ್ದೇಶಿಸಿ ಯು. ಜನಾರ್ಧನ ನಾಯರ್, ಸೂರ್ಯನಾರಾಯಣಭಟ್, ಭಾಸ್ಕರ ರಾವ್, ಎಮ್ ಬಾಲಕೃಷ್ಣ ಗೌಡ ಮೊದಲಾದವರು ಭಾಷಣ ಮಾಡಿದರು.

ಪುತ್ತೂರಿನ ಬಹಿರಂಗ ಸಭೆಯನ್ನುದ್ದೇಶಿಸಿ ಎಂ, ಕೆ. ಭಟ್ ಕೆ. ಮೋನಪ್ಪ ಗೌಡ, ಬಿ. ರಾಮಕೃಷ್ಣ ಮೊದಲಾದವರು ಮಾತನಾಡಿದರು.

(3ನೇ ಪುಟದಿಂದ)

ನ್ನೆಲ್ಲಾ ಬಲಗೊಳಿಸಿ, ಹೋರಾಟಗಳನ್ನು ಮುಂದುವರಿಸಿ ಜನ ಜಾಗೃತಿ ಉಂಟು ಮಾಡಿ ಕಾಂಗ್ರೆಯನ್ನು ಸೋಲಿಸುವ ಭೀಮಬಲ ಬೆಳೆಸುವುದು ಅತ್ಯಗತ್ಯ.

ಕಾಶ್ಮೀರ-ಆಂಧ್ರಗಳಲ್ಲಿ ಇಂದಿರಾ ಗಾಂಧಿ ನಡೆಸಿದ ಪ್ರಜಾಪ್ರಭುತ್ವದ ಕೊಲೆ ಅಂಥ ಸಂಯುಕ್ತ ಸಂಘಟನೆಯ ಚಳುವಳಿಯ ಅಗತ್ಯತೆಯನ್ನು ಒತ್ತಿ ಹೇಳಿ ತೋರಿಸಿದೆ. ಆಂಧ್ರದ ಗವರ್ನರರ ಕೃತಿಯ ವಿರುದ್ಧ, ಆಂಧ್ರ ದೇಶದ ಜನತೆ ಹೋರಾಟ ನಡೆಸಿವೆ. ಭಾರತ ದೇಶದ ಜನತೆ ಆಂಧ್ರ ದೇಶದ ಜನತೆಯೊಡನೆ ಸೇರಿಕೊಳ್ಳೋಣ. ಪ್ರಜಾಪ್ರಭುತ್ವದ ಕಗ್ಗೊಲೆಯನ್ನು ವಿರೋಧಿಸೋಣ. ಶಾಸನ ಸಭೆಯಲ್ಲೇ ಬಹುಮತದ ಪರೀಕ್ಷೆ ನಡೆಯಬೇಕೆಂಬ ಬೇಡಿಕೆಗೆ ಹೋರಾಡೋಣ. ಕೇಂದ್ರದ ತಾಳಕ್ಕೆ ಕುಣಿಯುವ ಗವರ್ನರುಗಳು ಬೇಡವೆಂದು ಕೂಗೆಬ್ಬಿಸೋಣ.

ಉಳ್ಳಾಲ ಕಡಲ್ಕೊರೆತ ತಡೆ ಯೋಜನೆ ವಿಫಲ

ಉಳ್ಳಾಲ ಕಡಲಿನ ಬಳಿಯ ಕಡಲ್ಕೊರೆತಕ್ಕೆ ತಡೆಯಾಗಿ ಕಲ್ಲು ಹಾಕಿ ದಂಡೆ ಕಟ್ಟಲು ಯೋಜನೆ ಹಾಕಿದೆ. ಇದಕ್ಕೆ ಕಂಡಾಪಟ್ಟೆ ಕಲ್ಲು ಹಾಕಿ ಕಲ್ಲು ನಿಲ್ಲುವುದಿಲ್ಲ ಎಂದು ಕಂಟ್ರ್ಯಾಕ್ಟರ್‌ದಾರರು ಬೊಬ್ಬೆ ಹಾಕುತ್ತಾರೆ ಆದರೆ ನಿಜಸ್ಥಿತಿ ಹಾಗಲ್ಲ ಅದೇ ಸಣ್ಣ ಕಲ್ಲುಗಳನ್ನು ಹಾಕಿ ನಿಲ್ಲುವುದಿಲ್ಲ ಎಂದು ಹೇಳುವುದು ಸರಿಯಲ್ಲ ನಿಲ್ಲಬೇಕಾದರೆ ದೊಡ್ಡ ಕಲ್ಲುಗಳನ್ನು ಹಾಕಬೇಕು ಮತ್ತು ಬೇರೆ ಕಡೆಯಲ್ಲಿ ಯಾವ ರೀತಿ ಈ ಕೊರೆತವನ್ನು ತಡೆಗಟ್ಟಿದ್ದಾರೆ ಎಂದು ಕಂಟ್ರ್ಯಾಕ್ಟ್ ದಾರರು ಅಭ್ಯಾಸ ಮಾಡಬೇಕು.

ಈ ಸಂಬಂಧ ಜಿಲ್ಲಾಧಿಕಾರಿಯವರಿಗೆ ಮನವಿಯೊಂದನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ವತಿಯಿಂದ ಸಲ್ಲಿಸಲಾಗಿದೆ.

ಮಂಗಳೂರು

ಎಸ್. ಎಫ್. ಐ. ನಿಂದ ಸತ್ಯಾಗ್ರಹ

ದ. ಕ. ಜಿಲ್ಲೆಯ ಸರಕಾರಿ ಶಾಲಾ, ಕಾಲೇಜುಗಳಲ್ಲಿ ಕೊರತೆ ಇರುವ ಅಧ್ಯಾಪಕರ ಸ್ಥಾನವನ್ನು ಭರ್ತಿ ಮಾಡಲು ಒತ್ತಾಯಿಸಿ ತಾ|| 13-8-1984 ರಂದು ಪ್ರಥಮ ದಿನ ಪೆರ್ಮನ್ನೂರು ಸರಕಾರಿ ಪ್ರೌಢ ಶಾಲೆಯ ಭಾರತ ವಿದ್ಯಾರ್ಥಿ ಫೆಡರೇಶನಿನ (ಎಸ್. ಎಫ್. ಐ) ಘಟಕದ ವಿದ್ಯಾರ್ಥಿಗಳು ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಈ ಶಾಲೆಯಲ್ಲಿ ಕಳೆದ 2 ತಿಂಗಳಿಂದ ಗಣಿತಕ್ಕೆ ಅಧ್ಯಾಪಕರಿಲ್ಲದೆ. ಈ ವಿಷಯಕ್ಕೆ ಸಂಬಂಧಪಟ್ಟ ಪಾಠಗಳು ಪ್ರಾರಂಭವಾಗಿಲ್ಲ

ಸತ್ಯಾಗ್ರಹವನ್ನು ಎಸ್. ಎಫ್. ಐ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಪಟೇಕರ್, ಉದ್ಘಾಟಿಸಿದರು

ತಾ|| 14 ರಂದು ಮಂಗಳೂರಿನಲ್ಲಿರುವ ಸರಕಾರಿ ಕಾಲೇಜಿನ ಎಸ್. ಎಫ್. ಐ. ಘಟಕದ ವಿದ್ಯಾರ್ಥಿಗಳು ಸತ್ಯಾಗ್ರಹದಲ್ಲಿ ಪಾಲುಗೊಂಡಿದ್ದಾರೆ. ಪ್ರತೀ ದಿನ ಒಂದೊಂದು ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಸತ್ಯಾಗ್ರಹದಲ್ಲಿ ಪಾಲುಗೊಳ್ಳುತ್ತಿದ್ದಾರೆ.

ಮಂಜೇಶ್ವರ

ಡಿ. ವೈ. ಎಫ್. ಐ. ನಿಂದ ವಾಹನ ಪ್ರಚಾರ ಜಾಥಾ

ದೇಶವು ತನ್ನ 38 ನೇ ಸ್ವಾತಂತ್ರ್ಯ ದಿನವನ್ನ ಆಚರಿಸುತ್ತಿರುವಾಗ ಕಾಸರಗೋಡು ಜಿಲ್ಲೆಯ ಪ್ರಜಾಪ್ರಭುತ್ವ ಯುವಜನ ಸಂಘಟನೆಯು, ಜನತೆಯು ಅದರಲ್ಲೂ ಯುವಕರು ಅನುಭವಿಸುವ ಕಷ್ಟ-ಕಾರ್ಪಣ್ಯಗಳನ್ನ, ಅದಕ್ಕೆ ಜವಾಬ್ದಾರಿ ಯಾರೆಂಬುದನ್ನೂ, ಅದಕ್ಕೆ ಕಾರಣ ಏನೆಂಬುದನ್ನೂ ಜನತೆಗೆ ತಿಳಿಸಲು ಒಂದು ವಾಹನ ಜಾಥಾವನ್ನು ಸಂಘಟಿಸಿತು.

ಈ ಜಾಥಾದ ಉದ್ಘಾಟನಾ ಸಮಾರಂಭ ಆಗಸ್ಟ್ 15 ರಂದು ಮಂಜೇಶ್ವರ ಹೊಸಂಗಡಿ ಬಳಿಯಲ್ಲಿ ಜರಗಿತು ಕಾ|| ಮಾಧವ ಸ್ವಾಗತ ಭಾಷಣ ಮಾಡಿದರು. ಸಭೆಯಲ್ಲಿ ಮಾತನಾಡಿದ ಡಿ.ವೈ ಎಫ್. ಐ. ಕೇರಳ ರಾಜ್ಯ ಸಮಿತಿ ಕಾರ್ಯದರ್ಶಿ ಕಾ| ಗೋವಿಂದ ಮಾಸ್ತರ್ ಮಾತನಾಡುತ್ತಾ ನಮ್ಮ ದೇಶವು ಸ್ವಾತಂತ್ರ್ಯ ಸಿಕ್ಕುವಾಗ ಬರೇ 33 ಲಕ್ಷ ನಿರುದ್ಯೋಗಿಗಳಿದ್ದುದು ಈಗ 12 ಕೋಟಿಗೂ ಮಿಕ್ಕಿದೆ. ಭಾರತದಲ್ಲಿ ಬೇಕಾದಷ್ಟು ಸಂಪನ್ಮೂಲಗಳಿವೆ ಯಾದರೂ ಅದನ್ನ ಉಪಯೋಗಿಸಿ ಜನತೆಗೆ ಬೇಕಾದಷ್ಟು ಕೆಲಸ ಕೊಡಿಸಬಹುದಾದರೂ, ನಮ್ಮನ್ನು ಆಳುವ ಸರಕಾರ ಇದು ಯಾವುದಕ್ಕೂ ಗಮನ ಹರಿಸದೆ, ಅಧಿಕಾರಕ್ಕೆ ಅಂಟಿಕೊಂಡು ಕೂತಿದೆ ಅಲ್ಲದೆ ಕೆಲವೇ ಗುತ್ತಿಗೆದಾರರಿಗೆ ಅನುಕೂಲತೆಗಳನ್ನು ಮಾಡಿಕೊಟ್ಟಿದೆ. ಅಲ್ಲಲ್ಲಿ ವಿವಿಧ ಸಂದರ್ಭಗಳಲ್ಲಿ ಉಂಟಾದ ಸ್ಥಳೀಯ ಪ್ರಶ್ನೆಗಳಿಗೆ ಪ್ರೋತ್ಸಾಹ ಕೊಟ್ಟು ಛಿದ್ರಶಕ್ತಿಯನ್ನು ಬೆಳೆಸಲು ಸಹಕರಿಸುತ್ತಿದೆ. ಇದನ್ನು ವಿರೋಧಿಸಲು ಪ್ರಜಾಪ್ರಭುತ್ವ ಯುವಜನ ಸಂಘಟನೆ ಮುಂದಾಗಬೇಕೆಂದು ಕರೆಯಿತ್ತರು.

ತಾ|| 17·9·84 ರಂದು ಕಾಸರಗೋಡು ಜಿಲ್ಲಾ ಕಛೇರಿಗಳಲ್ಲಿ ಸುಮಾರು 15000 ಯುವಜನರ ಒಂದು ಕೋಟೆಯನ್ನ ನಿರ್ಮಿಸಿ, ಆ ದಿನದ ಕೆಲಸವನ್ನು ಸ್ಥಂಬಿಸಲು ಈ ಪ್ರದೇಶದ ಯುವಜನರು ಸಹಕರಿಸಬೇಕೆಂದು ಕಾ| ಕರ್ತಂಬು ತಮ್ಮ ಭಾಷಣದಲ್ಲಿ ಕೇಳಿಕೊಂಡರು.

ಕೊನೆಗೆ ವಿದ್ಯಾಭ್ಯಾಸದ ಅವ್ಯವಸ್ಥೆಯ ಬಗ್ಗೆ ಬೆಳಕು ಬೀರುವ ಒಂದು ಬೀದಿ ನಾಟಕವನ್ನು ಸದಸ್ಯರು ಅಭಿನಯಿಸಿದರು.

ಮಂಜೇಶ್ವರ ರೈಲ್ವೆ ಸ್ಟೇಷನಿನಲ್ಲಿ ಡಿ. ವೈ. ಎಫ್. ಐ. ಸದಸ್ಯರ ಧರಣಿ

ಕಾಸರಗೋಡು ಕೇರಳದ ಒಂದು ಜಿಲ್ಲೆಯಾಗಿ ರೂಪೀಕರಣವಾಗುವಾಗ ಈ ಪ್ರದೇಶವು ಬಹಳ ಹಿಂದುಳಿದ ಪ್ರದೇಶವೆಂದು ಘೋಷಿಸಲಾಗಿದೆ. ಆದರೆ ಈ ಜಿಲ್ಲೆಯ ವಿಕಸನಕ್ಕೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ.

ಕಾಸರಗೋಡು ಜಿಲ್ಲೆಯ ಜನರಿಗೆ ಮಂಗಳೂರಿಗಾಗಲಿ, ತಿರುವನಂತಪುರಕ್ಕಾಗಲಿ ಹೋಗಬೇಕಾದರೆ ರೈಲ್ವೇ ಅಡಚಣೆಗಳು ಹಲವಾರು. ಪ್ರಯಾಣಿಕರಿಗೆ ಬೇಕಾದಷ್ಟು ಬೋಗಿಗಳಿಲ್ಲದಿರುವುದು, ರಿಸರ್ವೇಷನ್ ಕೂಡ ಬಹಳ ಕಮ್ಮಿಯಾಗಿರುವುದು ಇತ್ಯಾದಿ ಗಳು ಹಾಗಿಯೇ ಇತ್ತೀಚೆಗೆ ಎರ್ನಾಕುಳಂ ಕಣ್ಣಾನ್ನೂರು ವೇಗದ ರೈಲನ್ನು ಪ್ರಾರಂಭಿಸಿದ್ದರೂ, ಅದನ್ನು ಮಂಗಳೂರು ವರೆಗೆ ವಿಸ್ತರಿಸದೇ ಇರುವುದು ಕಾಸರಗೋಡು ಜಿಲ್ಲೆಯ ಮೇಲಿರುವ ಅವಗಣನೆಯಾಗಿದೆ.

ಈ ದೃಷ್ಟಿಯಲ್ಲಿ ಈ ಪ್ರಾಥಮಿಕ ಅವಶ್ಯಕತೆಗಳನ್ನು ಈಡೇರಿಸಲಿಕ್ಕಾಗಿ ಒತ್ತಾಯಿಸಲು ಮಂಜೇಶ್ವರ ಬ್ಲೋಕಿನ ಡೆಮಾಕ್ರೆಟಿಕ್ ಯೂತ್ ಫೆಡರೇಷನ್ ಸದಸ್ಯರು ತಾ. 12-8-84 ರಂದು ಸಾಮೂಹಿಕ ಧರಣಿ ಸತ್ಯಾಗಹವನ್ನು ನಡೆಸಿದರು.

ಈ ಧರಣಿ ಸತ್ಯಾಗ್ರಹವನ್ನು ಡಿ. ವೈ. ಎಫ್. ಐ. ಜಿಲ್ಲಾ ಅಧ್ಯಕ್ಷರಾದ ಕಾ ಕರ್ತಂಬು ಉದ್ಘಾಟಿಸಿದರು. ನೇತೃತ್ವವನ್ನು ಕಾ. ಪಿ. ಮುಹಮ್ಮದ್ ಮತ್ತು ಲೋಕನಾಥ್ ವಹಿಸಿದರು.

○

ಅಂತರ್ರಾಷ್ಟ್ರೀಯ

ಅಮೆರಿಕಕ್ಕೆ ಏಕಪಕ್ಷೀಯ ರಿಯಾಯಿತಿ ನೀಡುವುದಿಲ್ಲ: ಉಸ್ತಿನೋವ್

ಸೋವಿಯತ್ ರಷ್ಯಾದ ರಕ್ಷಣಾ ಮಂತ್ರಿ, ಪೊಲಿಟ್‌ಬ್ಯೂರೋ ಸದಸ್ಯ ಮಾರ್ಷಲ್ ಉಸ್ತಿನೊವ್ ತಾಸ್ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನವೊಂದರಲ್ಲಿ ಅಮೇರಿಕವು ಪಶ್ಚಿಮ ಯುರೋಪಿನಲ್ಲಿ ಪ್ರಥಮ ಹೊಡೆತದ ಅಣು ಕ್ಷಿಪಣಿಗಳನ್ನು ಸ್ಥಾಪಿಸಿರುವುದರಿಂದಾಗಿ ಉಂಟಾಗಿರುವ ಬಿಕ್ಕಟ್ಟು ಮತ್ತು ಈ ಬೆದರಿಕೆಯನ್ನು ಎದುರಿಸಲು ಸೋವಿಯತ್ ಯೂನಿಯನ್ ಕೈಗೊಂಡಿರುವ ಪ್ರತಿ ಕ್ರಮಗಳನ್ನು ವಿವರಿಸಿದ್ದಾರೆ.

ಯುರೋಪ್‌ನಲ್ಲಿ ಕ್ಷಿಪಣಿಗಳನ್ನು ಸ್ಥಾಪಿಸುತ್ತಲೇ ಅಮೇರಿಕವು ಅಣು ಅಸ್ತ್ರಗಳ ನಿಯಂತ್ರಣ ಕುರಿತಂತೆ ಮಾತುಕತೆ ನಡೆಸಲು ತೋರುತ್ತಿರುವ ಆಸಕ್ತಿ ಕೇವಲ ಬಾಯಿಮಾತಿನದಾಗಿದ್ದು ಸಾರ್ವಜನಿಕ ಅಭಿಪ್ರಾಯವನ್ನು ದಿಕ್ಕು ತಪ್ಪಿಸುವುದೇ ಆಗಿದೆಯೆಂದು ಉಸ್ತಿನೋವ್ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಾ ಹೇಳಿದ್ದಾರೆ. ವಾಸ್ತವ್ಯದಲ್ಲಿ ಸೋವಿಯತ್ ಯೂನಿಯನ್ ಯಾವ ಕಾರಣಕ್ಕೂ ಒಪ್ಪದ ನಿರ್ಬಂಧಗಳನ್ನು ಹೇರಿ ಅಣು ಅಸ್ತ್ರ ನಿಯಂತ್ರಣ ಮಾತುಕತೆ ನಡೆಸಲು ಅಮೇರಿಕ ಯೋಚಿಸುತ್ತಿದೆ. ಯುರೋಪಿನಲ್ಲಿ ಕ್ಷಿಪಣಿಗಳನ್ನು ನೆಲೆಗೊಳಿಸುವುದರಿಂದಾಗಿ ಸೋವಿಯತ್ ಯೂನಿಯನ್ ಹಾಗೂ ಅದರ ಮಿತ್ರ ರಾಷ್ಟ್ರಗಳಿಗೆ ಅಧಿಕ ಬೆದರಿಕೆಯೊಡ್ಡಿದೆ. ಖಂಡಾಂತರ ಕ್ಷಿಪಣಿಗಳು, ಎಂ.ಎಕ್ಸ್ ಕ್ಷಿಪಣಿಗಳು ಅಮೇರಿಕಕ್ಕೆ ಅಗತ್ಯವಾಗಿ ಬೇಕಾಗಿದೆ ಮತ್ತು ಈ ಕ್ಷಿಪಣಿಗಳನ್ನು ಅಮೇರಿಕ ಹೊಂದದಿದ್ದರೆ ಸೋವಿಯತ್ ಯೂನಿಯನ್ ಮಾತುಕತೆಗೆ ಬರುವುದಿಲ್ಲವೆಂಬ ಮಾತನ್ನು ರೇಗನ್ ಇತ್ತೀಚಿನ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಇಂತಹ ನಿಲುವು ಒಪ್ಪಂದಕ್ಕೆ ಬರಲು ಸಹಕಾರಿಯಾಗಿದೆಯೆ ?.

ದ್ವಿಮುಖ ನೀತಿ

ಒಂದು ಕಡೆ ಶಸ್ತ್ರಾಸ್ತ್ರ ನಿಯಂತ್ರಣದ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಲೆ ಇನ್ನೊಂದೆಡೆ ಅಮೇರಿಕನ್ ಸರ್ಕಾರದ ಪ್ರಭಾವಿ ವ್ಯಕ್ತಿಗಳು ಸೋವಿಯತ್ ಯೂನಿಯನ್ ನೊಂದಿಗೆ ಮಾಡಿಕೊಂಡಿರುವ ಅಣು ಅಸ್ತ್ರ ನಿಯಂತ್ರಣದ ಎಲ್ಲ ಒಪ್ಪಂದಗಳನ್ನು ತಿರಸ್ಕರಿಸಬೇಕೆಂದು ಮಾತನಾಡುತ್ತಿದ್ದಾರೆ ಪ್ರಸಕ್ತ ಜಾಗತಿಕ ಬಲಾಬಲಗಳನ್ನು ಗಣನೆಗೆ ತೆಗೆದುಕೊಳ್ಳದೆ ಇಡಿ ಜಗತ್ತಿಗೆ ಬೆದರಿಕೆಯನ್ನೊಡ್ಡುತ್ತಿರುವ ಯುದ್ಧಕೋರ ಅಮೇರಿಕವು ಅಣ್ವಸ್ತ್ರ ನಿಯಂತ್ರಣಕ್ಕೆ ಸಂಬಂಧಪಟ್ಟ ಒಪ್ಪಂದಗಳ ಅನುಸರಣೆ ಕೇವಲ ರಷ್ಯಾದ ಹಿತದೃಷ್ಟಿಯಿಂದಲ್ಲದೆ ಅಮೇರಿಕದ ಹಿತದಿಂದಲೂ ಪ್ರಮುಖವೆಂಬುದನ್ನು ಮರೆಯಬಾರದು. ಅಮೇರಿಕ ತನ್ನ ವ್ಯಾಪಕ ಕ್ಷಿಪಣಿ ನಿರೋಧಕಗಳಿಂದ ರಷ್ಯಾದ ಮೇಲೆ ಒತ್ತಡ ತಂದು ಬೆದರಿಕೆಯನ್ನೊಡ್ಡಿ ರಷ್ಯಾದಿಂದ ಏಕಪಕ್ಷೀಯ ರಿಯಾಯಿತಿಗಳನ್ನು ಪಡೆಯಬಹುದೆಂದು ಅಮೇರಿಕ ಹಗಲು ಕನಸು ಕಾಣುತ್ತಿದೆ. ಬೆದರಿಕೆ ಅಥವಾ ಒತ್ತಡಗಳ ಹಿನ್ನಲೆಯಲ್ಲಿ ಮಾತುಕತೆ ನಡೆಸಲು ರಷ್ಯ ಸಿದ್ಧವಿಲ್ಲವೆಂದು ಉಸ್ತಿನೋವ್ ಹೇಳಿದ್ದಾರೆ. ಆದರೆ ಪ್ರಾಮಾಣಿಕ, ಸಮಾನತೆಯನ್ನು ಆಧರಿಸಿದ ರಚನಾತ್ಮಕ ಮಾತುಕತೆಗೆ ರಷ್ಯಾ ಎಂದೂ ಸಿದ್ಧವಿದೆ ಎಂದು ತಿಳಿಸಿದ್ದಾರೆ.

ಇಂತಹ ಮಾತುಕತೆಗೆ ಅಗತ್ಯವಾದ ಭೂಮಿಕೆ ಯಾವುದು ? ಇಡೀಜಗತ್ತಿಗೆ

(8ನೇ ಪುಟ ನೋಡಿ)

ಹಲವು ಯೋಜನೆ — ಹಲವು ಸಾಧನೆ

ಕರ್ನಾಟಕದಲ್ಲಿ ಹೊಸ ಸರ್ಕಾರ ಅಧಿಕಾರ ವಹಿಸಿಕೊಂಡು ಒಂದೂವರೆ ವರ್ಷ ಕಳೆಯಿತು. ಈ ಅವಧಿಯಲ್ಲಿ ಸರ್ಕಾರವು ಹಲವಾರು ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳು ಗ್ರಾಮೀಣ ಜನತೆಯ ಬಡತನವನ್ನು ನಿವಾರಿಸಿ, ಅವರ ಬಾಳನ್ನು ಹಸನುಗೊಳಿಸಲೆಂದೇ ರೂಪಿಸಿದೆ. ಆಡಳಿತ, ಗ್ರಾಮ ಸ್ವರಾಜ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ತರಲೆಂದೇ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ.

ಸಮಗ್ರ ಶಿಕ್ಷಣ ಮಸೂದೆ

ರಾಜ್ಯದಲ್ಲಿ ಪ್ರಥಮ ಬಾರಿಗೆ ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ಸಮಗ್ರ ಶಿಕ್ಷಣ ಮಸೂದೆಯ ರಚನೆ. ಅನಕ್ಷರತೆಯ ನಿರ್ಮೂಲನೆಗಾಗಿ ಅಕ್ಷರ ಸೇನೆ. ಪ್ರತಿವರ್ಷ ಎರಡು ಸಾವಿರ ಪ್ರಾಥಮಿಕ ಪೂರ್ವ ಶಾಲೆಗಳನ್ನು ಪ್ರಾರಂಭಿಸುವುದು ಇದರ ಗುರಿ. ಶಾಲೆ ಬಿಟ್ಟ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣ ನೀಡುವ 3769 ಸಾಕ್ಷರತಾ ಕೇಂದ್ರಗಳನ್ನು ತೆರೆಯಲಾಗಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ಕ್ಯಾಪಿಟೇಷನ್ ಶುಲ್ಕ ವಸೂಲಿ ರದ್ದತಿ. ಬೋಧನಾ ಶುಲ್ಕ, ಠೇವಣಿ ಹಾಗೂ ಇತರ ಶುಲ್ಕಗಳ ನಿಷೇಧ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪರೀಕ್ಷೆ ಇವು ಸಮಗ್ರ ಶಿಕ್ಷಣ ಮಸೂದೆಯ ಮುಖ್ಯಾಂಶಗಳು.

ಕೃಷಿಕರಿಗೆ ಬೆಂಬಲ

ರೈತರ ಸ್ಥಿತಿಗತಿಗಳ ಸುಧಾರಣೆಗೆ ಸರ್ಕಾರದ ಆದ್ಯ ಗಮನ ಈಗಾಗಲೇ ಸುಮಾರು 70 ಕೋಟಿ ರೂ.ಗಳ ಪರಿಹಾರವನ್ನು ನೀಡಲಾಗಿದೆ.

ದೀರ್ಘಕಾಲ ಬಾಕಿ ಉಳಿದಿದ್ದ ಕಂದಾಯ, ನೆರೆ ಪರಿಹಾರಗಳ ಸಾಲ ಮನ್ನಾ ಆಹಾರ ಧಾನ್ಯಗಳಿಗೆ ಬೆಂಬಲ ಬೆಲೆ ನಿರ್ಧಾರ.

ಸಹಕಾರಿ ಮತ್ತು ಕೃಷಿ ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಗಳ ಮನ್ನಾ. ಇದರಿಂದ 7·62 ಲಕ್ಷ ರೈತರಿಗೆ ಪ್ರಯೋಜನ

ಒಣ ಬೇಸಾಯ ಅಭಿವೃದ್ಧಿಗೆ ಉತ್ತೇಜನ. ಸಣ್ಣ ಮತ್ತು ಹಿಂದುಳಿದ ವರ್ಗದ ರೈತರಿಗೆ ಬೀಜ ಹಾಗೂ ಗೊಬ್ಬರಗಳ ಪೂರೈಕೆ.

ಉದ್ಯಮಗಳಿಗೆ ಸದವಕಾಶಗಳು

ರಾಜ್ಯದ ಕೈಗಾರಿಕಾಭಿವೃದ್ಧಿಗೆ ಹೊಸ ಧೋರಣೆ. ಪ್ರತಿ ತಿಂಗಳು ಒಂದು ಸಾವಿರ ಕೈಗಾರಿಕೆಗಳ ಸ್ಥಾಪನೆಗೆ ಕ್ರಮ. ಇದುವರೆವಿಗೆ ಪ್ರತಿ ತಿಂಗಳು 630 ಹೊಸ ಘಟಕಗಳ ಸ್ಥಾಪನೆ.

ಹೊಸ ಕೈಗಾರಿಕೆಗಳ ಸ್ಥಾಪನೆಗೆ ಎಲ್ಲ ನೆರವನ್ನು ಒಂದೆಡೆ ದೊರೆಯುವ ವ್ಯವಸ್ಥೆ.

ಅಂತ್ಯೋದಯ

ಪ್ರತಿ ಗ್ರಾಮದ ಐದು ಕಡುಬಡವರ ಕುಟುಂಬಗಳಿಗೆ ವಿವಿಧ ಉತ್ಪಾದನಾ ಕಾರ್ಯಗಳನ್ನು ಕೈಗೊಳ್ಳಲು ಸಾಲ ಮತ್ತು ಸಹಾಯಧನದ ನೆರವು. ಇದೀಗ ರಾಜ್ಯದ 19 ಜಿಲ್ಲೆಗಳ 46 ತಾಲ್ಲೂಕುಗಳಲ್ಲಿ ಜಾರಿಯಾಗಿದೆ.

ಸ್ವಯಂ ಉದ್ಯೋಗಕ್ಕೆ ನೆರವು

ನಿರುದ್ಯೋಗ ಪದವೀಧರರು ಸ್ವಯಂ ಉದ್ಯೋಗಗಳನ್ನು ಕೈಗೊಳ್ಳಲು ಸಹಾಯಧನವೂ ಸೇರಿದಂತೆ ಎಲ್ಲ ರೀತಿಯ ನೆರವು. ತಾಂತ್ರಿಕ ಹಾಗೂ ವೃತ್ತಿ ಪರಿಣತರಿಗೆ ನೂರಕ್ಕೆ ನೂರು ಹಣಕಾಸು ನೆರವು ನೀಡುವ ಯೋಜನೆಯ ಮೊಬಲಗನ್ನು 5 ಲಕ್ಷ ರೂ. ಗಳಿಂದ 7·5 ಲಕ್ಷ ರೂ. ಗಳಿಗೆ ಹೆಚ್ಚಿಸಲಾಗಿದೆ.

ನಿರಂತರ ಉದ್ಯೋಗ

ಗ್ರಾಮೀಣ ಪ್ರದೇಶದ 18 ರಿಂದ 60 ವರ್ಷ ವಯಸ್ಸಿನ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನೀಡಲು ನಿರಂತರ ಉದ್ಯೋಗ ಯೋಜನೆಯ ಪ್ರಾರಂಭ. ಇದನ್ನೀಗ ರಾಜ್ಯದ 25 ತಾಲ್ಲೂಕುಗಳಲ್ಲಿ ಕಾರ್ಯಗತಗೊಳಿಸಲಾಗಿದೆ.

ಕುಡಿಯುವ ನೀರು

ಹಳ್ಳಿಹಳ್ಳಿಗೂ ಕುಡಿಯುವ ನೀರಿನ ಪೂರೈಕೆ. ಈಗಾಗಲೇ ರಾಜ್ಯದ 16 000 ಹಳ್ಳಿಗಳಲ್ಲಿ 20 ಸಾವಿರ ಕೊಳವೆ ಬಾವಿಗಳು, ಸಾಧ್ಯವಾಗದ ಕಡೆ 560 ತೆರೆದ ಬಾವಿಗಳ ನಿರ್ಮಾಣ.

ಜನಜೀವನ ಸುಧಾರಣೆಗೆ ಕೈಗೊಂಡ ಇತರ ಕ್ರಮಗಳು

* ಆಡಳಿತ ವಿಕೇಂದ್ರೀಕರಣಕ್ಕಾಗಿ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತುಗಳ ಸ್ಥಾಪನೆಗೆ ಮಸೂದೆಯ ಅಂಗೀಕಾರ.
* ಗ್ರಾಮೀಣ ಪ್ರದೇಶಗಳ ಸಾರಿಗೆ ಸುಧಾರಣೆಗಾಗಿ ಸಮಗ್ರ ಸಾರಿಗೆ ಯೋಜನೆ.
* ಶಾಲಾ, ಕಾಲೇಜು, ವಿದ್ಯಾರ್ಥಿಗಳು. ಪತ್ರಕರ್ತರು ಮತ್ತು ವೃದ್ಧರಿಗೆ ರಿಯಾಯಿತಿ ಪ್ರಯಾಣ ಸೌಲಭ್ಯ.
* ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಆಯೋಗದ ನೇಮಕ.

‘ಕರ್ನಾಟಕ ವಾರ್ತೆ’

ಸೆ. 1 - ಅಂತರಾಷ್ಟ್ರೀಯ ಶಾಂತಿ ದಿನ

ಪ್ರಪಂಚದಲ್ಲಿ ಅಣು ಯುದ್ಧದ ಅಪಾಯ ಇಂದು ಹಿಂದೆಂದಿಗಿಂತಲೂ ಹೆಚ್ಚಾಗಿ ಬೆಳೆದಿದೆ. ಜಾಗತಿಕ ಬಂಡವಾಳಶಾಹಿ ಪದ್ಧತಿಯು ತೀವ್ರವಾದ ಬಿಕ್ಕಟ್ಟಿನಲ್ಲಿದೆ. ಅಮೇರಿಕ ಸಂಯುಕ್ತ ಸಂಸ್ಥಾನಗಳು, ಬ್ರಿಟನ್ ಗಳಂತಹ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿಯೇ ಹಣದುಬ್ಬರ, ಬೆಲೆ ಏರಿಕೆ, ನಿರುದ್ಯೋಗದ ಪಿಡುಗುಗಳು ಬೆಳೆಯುತ್ತಿವೆ. ಪ್ರಪಂಚದ ಸಮಾಜವಾದಿ ದೇಶಗಳಲ್ಲಿ ಈ ಪಿಡುಗುಗಳಿಲ್ಲ. ಆದ್ದರಿಂದ ಸಹಜವಾಗಿಯೇ ಮೂರನೆಯ ಜಗತ್ತಿನ ಜನರು ತಮ್ಮ ತಮ್ಮ ದೇಶಗಳ ಬೆಳವಣಿಗೆಯ ಮತ್ತು ಜನರ ಕ್ಷೇಮಾಭಿವೃದ್ಧಿಯ ವಿಷಯಗಳಲ್ಲಿ ವಿಚಾರ ಮಾಡುವಾಗ ಸಮಾಜವಾದದತ್ತ ಆಕರ್ಷಿತರಾಗುತ್ತಿದ್ದಾರೆ. ಇದು ಸಾಮ್ರಾಜ್ಯಶಾಹಿಗಳಿಗೆ ದೊಡ್ಡ ತಲೆನೋವು.

ಆದ್ದರಿಂದ ಸಾಮ್ರಾಜ್ಯಶಾಹಿಗಳು ಸಮಾಜವಾದಿ ದೇಶಗಳ ಮೇಲೆ ಮುಖ್ಯವಾಗಿ ಸೋವಿಯತ್ ಒಕ್ಕೂಟದ ಮೇಲೆ ಕ್ಷಣಗಳಲ್ಲಿ ದಾಳಿ ಮಾಡಲು ಪಶ್ಚಿಮ ಯೂರೋಪಿನಲ್ಲಿ ಕಳೆದ ಡಿಸೆಂಬರಿನಲ್ಲಿ ಪರ್ಷಿಂಗ್ 11 ಮತ್ತು ಕ್ರೂಯಿಸ್ ಕ್ಷಿಪಣಿಗಳನ್ನು ಸ್ಥಾಪಿಸಿದರು. ಈ ಕ್ರಮದ ವಿರುದ್ಧ ಪ್ರಪಂಚದಾದ್ಯಂತ ಪ್ರತಿಭಟನಾ ಚಳುವಳಿ ಬೆಳೆದು ಬಂದಿದೆ.

ಅಮೇರಿಕ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಗಳು ನಮ್ಮ ನೆರೆರಾಜ್ಯವಾದ ಪಾಕಿಸ್ಥಾನಕ್ಕೆ ಅಗಾಧ ಪ್ರಮಾಣದ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಾಂಬುಗಳನ್ನು ಒದಗಿಸುವುದರಿಂದ ಭಾರತದ ಭದ್ರತೆಗೆ ಅಪಾಯ ಬಂದಿದೆ.

ಅಣು ಬಾಂಬ್ ಮೊದಲು ಉಪಯೋಗವಾದದ್ದು ಎರಡನೆಯ ಜಾಗತಿಕ ಮಹಾ ಯುದ್ಧದಲ್ಲಿ. ಆ ಯುದ್ಧ ಪ್ರಾರಂಭವಾದುದು 1939ರ ಸೆಪ್ಟೆಂಬರ್ ನಲ್ಲಿ. 1982 ಮತ್ತು 83ರಲ್ಲಿ ಸೆಪ್ಟೆಂಬರ್ 1 ರಂದು "ಶಾಂತಿ ದಿನ" ವನ್ನು ಆಚರಿಸಿದಂತೆ ಈ ವರ್ಷವೂ "ಶಾಂತಿ ದಿನ" ವನ್ನು ಆಚರಿಸಲು ಸಿ. ಐ. ಟಿ. ಯು. ಕರೆ ಕೊಟ್ಟಿರುವುದು ಉಚಿತವೂ ಸೂಕ್ತವೂ ಆಗಿದೆ. ಈ ಕರೆಯ ಮೇರೆಗೆ ಸೆಪ್ಟೆಂಬರ್ 1 ರಂದು ನಡೆಯುವ ಶಾಂತಿ ದಿನಾಚರಣೆಯನ್ನು ಯಶಸ್ವಿಗೊಳಿಸಿರಿ.

ಎನ್. ಟಿ. ಆರ್. ಸರ್ಕಾರ ವಜಾ-ಪ್ರತಿಭಟನೆ

ಬೆಂಗಳೂರು

ಆಂಧ್ರ ಪ್ರದೇಶದ ಎನ್. ಟಿ. ರಾಮರಾವ್ ಸರ್ಕಾರವನ್ನು ಅಲ್ಲಿನ ರಾಜ್ಯಪಾಲ ರಾಮಲಾಲ್ ವಜಾ ಮಾಡಿದ್ದನ್ನು ಪ್ರತಿಭಟಿಸಿ 16-8-84 ರಂದು ರಾತ್ರಿ ಬೆಂಗಳೂರಿನ ಸಿಪಿಐ (ಎಂ) ಕಾರ್ಯಕರ್ತರು ಪಕ್ಷದ ಕಚೇರಿಯಿಂದ ರಾಜ ಭವನದ ವರೆಗೆ ಪಂಜಿನ ಮೆರವಣಿಗೆ ನಡೆಸಿದರು. ಮರುದಿನ ಕಾಂಗ್ರೆಸ್ಯೇತರ ವಿರೋಧ ಪಕ್ಷಗಳು ಸಂಜೆ 6 ಗಂಟೆಗೆ ಪುರಭವನದಲ್ಲಿ ಪ್ರತಿಭಟನಾ ಸಭೆ ನಡೆಸಿದವು. ಸಭೆಗೆ ಸಿ.ಪಿ.ಐ. (ಎಂ) ಕಾರ್ಯಕರ್ತರು ಮೆರವಣಿಗೆಯಲ್ಲಿ ಬಂದು ಪಾಲ್ಗೊಂಡರು. ನಂತರ ನಡೆದ ಕಿಕ್ಕಿರಿದ ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಮಾತನಾಡಿದರು. ಸಿ ಪಿ ಐ. (ಎಂ) ನ ಪರವಾಗಿ ಶಾಸಕರಾದ ಕಾ॥ ಎಸ್. ಸೂರ್ಯನಾರಾಯಣರಾವ್ ಮಾತನಾಡಿದರು. ಕಾ॥ ಸೂರಿಯವರು ತಮ್ಮ ಭಾಷಣದಲ್ಲಿ ಕಾರ್ಮಿಕರ ರೈತರ ಹೋರಾಟವನ್ನು ಮುಂದುವರಿಸಬೇಕಾದರೆ ಪ್ರಜಾಪ್ರಭುತ್ವದ ರಕ್ಷಣೆ ಅತ್ಯಗತ್ಯವೆಂದೂ, ಇಂದಿರಾಗಾಂಧಿ ಅದರ ಕೊಲೆ ಮಾಡುತ್ತಿರುವುದರಿಂದ ಐಕ್ಯ ಹೋರಾಟ ಮುಂದುವರಿಸುವುದು ಅಗತ್ಯವೆಂದೂ ಹೇಳಿದರು.

ತುಮಕೂರು

ತುಮಕೂರಿನಲ್ಲಿ ಆಗಸ್ಟ್ 18 ರಂದು ಸಿಪಿಐ (ಎಂ) ಮತ್ತು ಕಾಂಗ್ರೆಸ್ಯೇತರ ವಿರೋಧ ಪಕ್ಷಗಳ ಕಾರ್ಯಕರ್ತರು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು ಮತ್ತು ಬೆಂಗಳೂರಿನಿಂದ ನಗರಕ್ಕೆ ಆಗಮಿಸುತ್ತಿದ್ದ ರೈಲನ್ನು 45 ನಿಮಿಷ ತಡೆದು ಪ್ರತಿಭಟಿಸಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಸಿಪಿಐ (ಎಂ) ನ ಪರವಾಗಿ ಕಾ॥ ಕೆ. ಆರ್. ನಾಯಕ್ ಭಾಷಣ ಮಾಡಿದರು.

ಬಾಗೇಪಲ್ಲಿ

ಆಗಸ್ಟ್ 18 ರಂದು ಸಿಪಿಐ (ಎಂ) ನ ಬಾಗೇಪಲ್ಲಿ ತಾಲ್ಲೂಕ್ ಸಮಿತಿ ಎಸ್.ಎಫ್.ಐ. ಮತ್ತು ರೈತಸಂಘದ ಕರೆಯ ಪ್ರಕಾರ ಮೆರವಣಿಗೆ ಮತ್ತು "ಬಾಗೇಪಲ್ಲಿ ಬಂದ್" ಯಶಸ್ವಿಯಾಗಿ ನಡೆಯಿತು. ನಂತರ ನಡೆದ ಬಹಿರಂಗ ಸಭೆಯಲ್ಲಿ ಸಿಪಿಐ (ಎಂ) ಶಾಸಕರಾದ ಕಾ॥ ಎ. ವಿ. ಅಪ್ಪಸ್ವಾಮಿರೆಡ್ಡಿ ಮತ್ತು ಕಾ॥ ಜಿ. ವಿ. ಶ್ರೀರಾಮರೆಡ್ಡಿ ಮಾತನಾಡಿದರು.

ಪ್ರಜಾಪ್ರಭುತ್ವದ ಕಗ್ಗೊಲೆ ನಿಲ್ಲಲಿ

(1ನೇ ಪುಟದಿಂದ)

ಅಪಾಯ ಅಂಚಿಗೆ ನೂಕುತ್ತಿವೆ. ನಮ್ಮ ದೇಶದ ಸುತ್ತ ಹೆಣೆದುಕೊಂಡಿರುವ ಅಪಾಯದ ಬಲೆಯತ್ತ ಬೆರಳು ತೋರಿಸುತ್ತಾ ಆ ಅಪಾಯವನ್ನು ಎದುರಿಸುವ ಪ್ರಯತ್ನ ಮಾಡದೆ. ಇಲ್ಲಿನ ಜನಜೀವನವನ್ನು ವಿರೂಪಗೊಳಿಸುವ ಕೃತ್ಯಗಳು ಖಂಡನೀಯ.

ಈ ದಿಸೆಯಲ್ಲಿ ಆಂಧ್ರ ಪ್ರದೇಶದ ರಾಜ್ಯಪಾಲ ಮಾಜಿ ಪಕ್ಷಾಂತರ ರಾಜಕಾರಣಿ ವರ್ತನೆ ಸಂವಿಧಾನಿಕ ಔಚಿತ್ಯದ ಎಲ್ಲೆಗಳನ್ನು ಮೀರಿದೆ. ತನಗಿರುವ ಸ್ಪಷ್ಟ ಬೆಂಬಲವನ್ನು ದೇಶಕ್ಕೆ ಸಾರಲು ಪತ್ರಿಕಾ ಗೋಷ್ಠಿಯ ಮುಂದೆ 168 ಶಾಸಕರನ್ನೂ ಪ್ರದರ್ಶಿಸುತ್ತಿದ್ದ ಸಮಯದಲ್ಲೇ "ನಿಮಗೆ ಬೆಂಬಲವಿಲ್ಲವೆಂದು ನನಗೆ ಮನವರಿಕೆಯಾಗಿದೆ". ಎನ್ನುವ ರಾಜ್ಯಪಾಲರ ಪತ್ರ ಈ ದೇಶದ ಪ್ರಜೆಗಳಿಗೆ ಮಾಡಿದ ಮಹಾ ಮೋಸ. ಈ ರಾಜ್ಯಪಾಲರ ವರ್ತನೆಯನ್ನು ಅತ್ಯಂತ ಕಟು ಮಾತುಗಳಲ್ಲಿ ಖಂಡಿಸುತ್ತೇವೆ. ರಾಜ್ಯಪಾಲರನ್ನು ಕೇಂದ್ರ ಸರ್ಕಾರದ ತೊತ್ತುಗಳಂತೆ ಬಳಸಿಕೊಳ್ಳುತ್ತಿರುವ ಶ್ರೀಮತಿ ಇಂದಿರಾ ಗಾಂಧಿಯವರ ವರ್ತನೆ ನಾಚಿಕೆಗೇಡಿನದು.

ಆದರೆ ಈ ಸಮಯದಲ್ಲಿ ಸ್ವಯಂ ಸ್ಫೂರ್ತಿಯಿಂದ ಹೊರಹೊಮ್ಮಿದ ಸಾಮಾನ್ಯ ಜನರ ಪ್ರತಿಕ್ರಿಯೆ ಅವರ ಬೇಗುದಿ, ಕಳವಳ, ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವ ಅವರ ಬಯಕೆ ಆಶಾದಾಯಕ.

ದುಡಿಯುವ ಜನರ ಹಕ್ಕುಗಳನ್ನು ರಕ್ಷಿಸಲು ಮತ್ತು ಬೆಳೆಸಲು ತಮ್ಮ ದೈನಂದಿನ ಬೇಡಿಕೆಗಳಿಗಾಗಿ ಹೋರಾಟ ಮಾಡಲು ಸಾಮಾನ್ಯ ಜನರ ರಾಜಕೀಯ ಪ್ರಜ್ಞೆಯನ್ನು ವಿಸ್ತರಿಸಲು ಪ್ರಜಾಪ್ರಭುತ್ವ ಅತ್ಯಂತ ಅನುಕೂಲ್ಯವಾದದ್ದು. ಸ್ವಾತಂತ್ರ್ಯಕ್ಕಾಗಿ ನಡೆದ ಸುದೀರ್ಘ ಹೋರಾಟದಲ್ಲಿ ಸಾವಿರಾರು ದುಡಿಯುವ ಜನರ ತ್ಯಾಗ, ಬಲಿದಾನಗಳಿಂದ ಪಡೆದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ದುಡಿಯುವ ವರ್ಗ ಸನ್ನದ್ಧವಾಗಿದೆ. ಈ ಹಕ್ಕಿಗೆ ಚ್ಯುತಿ ತರುವ ಯಾವುದೇ ಕುತಂತ್ರಕ್ಕೆ ಅವಕಾಶ ಕೊಡುವುದಿಲ್ಲ ಎಂದು ನಮ್ಮ ರಾಜ್ಯದ ದುಡಿಯುವ ವರ್ಗ ಈ ದೇಶದ ಆಳ್ವಿಕೆ ತನ್ನ ಮನೆತನದ ಗುತ್ತೇದಾರಿ ಎಂದು ಭಾವಿಸಿರುವ ಇಂದಿರಾ ಗಾಂಧಿಗೆ ಅವರ ಕೃಪಾ ಪೋಷಿತ ಪಕ್ಷಕ್ಕೆ ಮತ್ತು ಅವರ ಕೈಗೊಂಬೆಗಳಂತೆ ಕುಣಿಯುತ್ತಿರುವ, ಕುಣಿಯಲು ಸಜ್ಜಾಗಿರುವ ರಾಜ್ಯಪಾಲರುಗಳಿಗೆ ಅವಕಾಶ ಕೊಡುವುದಿಲ್ಲವೆಂದು ನಮ್ಮ ರಾಜ್ಯದ ದುಡಿಯುವ ವರ್ಗ ಎಚ್ಚರಿಕೆ ನೀಡುತ್ತದೆ. ಈ ಆದ್ಯ ಕರ್ತವ್ಯವನ್ನು ನಿರ್ವಹಿಸಲು ನಾವು ಅಣಿಯಾಗಿದ್ದೇವೆಂಬ ಸೂಚನೆಯಾಗಿ ಕೇಂದ್ರ ಕಾರ್ಮಿಕ ಸಂಘಟನೆಗಳು ಕೇಳಿಕೊಂಡ ಬೇಡಿಕೆಗಳಿಗಾಗಿ 25-8-84 ರಂದು ಬೆಂಗಳೂರು ನಗರದ ಎಲ್ಲಾ ಕಾರ್ಮಿಕರ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟಿದೆ. ಅಂದು ಬೆಳಿಗ್ಗೆ 11-00 ಗಂಟೆಗೆ ಮೈಸೂರು ಬ್ಯಾಂಕ್ ವೃತ್ತದಿಂದ ರಾಜಭವನಕ್ಕೆ ಒಂದು ಬೃಹತ್ ಮೆರವಣಿಗೆಯನ್ನು ಒಯ್ಯಬೇಕೆಂದು ತೀರ್ಮಾನಿಸಿದೆ.

ಒತ್ತಾಯಗಳು

1. ಆಂಧ್ರ ಪ್ರದೇಶದ ರಾಜ್ಯಪಾಲರನ್ನು ವಜಾ ಮಾಡಬೇಕು ಮತ್ತು ಎನ್. ಟಿ ರಾಮರಾವ್ ಅವರನ್ನು ಸರ್ಕಾರ ರಚಿಸಲು ಆಹ್ವಾನಿಸಬೇಕು.
2. ಜಮ್ಮು-ಕಾಶ್ಮೀರದ ಜಿ. ಎಂ. ಷಾ ಸರ್ಕಾರವನ್ನು ವಜಾ ಮಾಡಿ ತಕ್ಷಣವೇ ಚುನಾವಣೆ ನಡೆಸಬೇಕು.
3. ಕರ್ನಾಟಕ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ಕಾಂಗ್ರೆಸ್ಸೇತರ ಸರ್ಕಾರಗಳನ್ನು ಕುತಂತ್ರಗಳಿಂದ ಕಬಳಿಸುವ ಪ್ರಯತ್ನವನ್ನು ಕಾಂಗ್ರೆಸ್ (ಐ) ಕೈಬಿಡಬೇಕು.

(7ನೇ ಪುಟದಿಂದ)

ಮತ್ತು ನಿರ್ದಿಷ್ಟವಾಗಿ ಯುರೋಪಿನ ಭದ್ರತೆಗೆ ಬೆದರಿಕೆಯನ್ನೊಡ್ಡಿರುವ ಎಲ್ಲ ಕ್ರಮಗಳನ್ನು ನಿವಾರಿಸುವುದು, ಯುರೋಪ್‌ನಲ್ಲಿ ನೆಲೆಗೊಳಿಸಿರುವ ಕ್ಷಿಪಣಿಗಳನ್ನು ತೆಗೆಯುವುದು, ಶಸ್ತ್ರಾಸ್ತ್ರಗಳ ಪೈಪೋಟಿಯನ್ನು ಹೆಚ್ಚಿಸುವ ಅಥವಾ ಮಾತುಕತೆಗಳ ಮೂಲಕ ರಷ್ಯಾವನ್ನು ಏಕಪಕ್ಷೀಯವಾಗಿ ನಿಶ್ಶಸ್ತ್ರಗೊಳಿಸುವುದರ ಮೂಲಕ ಮಿಲಿಟರಿ ಮೇಲ್ಮೆಯನ್ನು ಸಾಧಿಸುವ ಹುಚ್ಚುತನವನ್ನ ಅಮೆರಿಕ ಬಿಡುವುದು.

ಸೋವಿಯತ್ ಯೂನಿಯನ್ ಮತ್ತು ಅದರ ಮಿತ್ರ ರಾಷ್ಟ್ರಗಳ ಭದ್ರತೆಗೆ ಬೆದರಿಕೆಯನ್ನೊಡ್ಡಿರುವ ಸಾಮ್ರಾಜ್ಯ ಷಾಹಿಗಳ ಯತ್ನಗಳ ವಿರುದ್ಧ ಕ್ರಮ ಕೈಗೊಳ್ಳಲು ರಷ್ಯಾದ ಸೇನೆಯನ್ನು ಸದಾಸಿದ್ಧವಾಗಿರುವಂತೆ ನೋಡಿಕೊಳ್ಳುವ ಹೊಣೆಯನ್ನು ಕಮ್ಯೂನಿಸ್ಟ್ ಪಕ್ಷ ತನ್ನ ಮುಂದಿರಿಸಿಕೊಂಡಿದೆ ಮತ್ತು ಸೋವಿಯತ್ ಯೂನಿಯನ್ನಿನ ರಕ್ಷಣಾ ಪಡೆಗಳು ಈ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಸದಾ ಸಿದ್ಧವಾಗಿದೆಯೆಂಬ ಅಂಶವನ್ನ ಉಸ್ತಿನೋವ್ ತಿಳಿಸಿದ್ದಾರೆ.

(1ನೇ ಪುಟದಿಂದ)

ಸರ್ವಾಧಿಕಾರವನ್ನು ಕಿತ್ತೊಗೆಯಿರಿ

ನಿರ್ಣಯಿಸಬೇಕೆಂಬ ಎನ್. ಟಿ. ಆರ್. ಸಲಹೆಯನ್ನು ರಾಜ್ಯಪಾಲರು ಒಪ್ಪಿಕೊಳ್ಳಲಿಲ್ಲೆಂಬುದಕ್ಕೆ ಉತ್ತರ ಕೊಡಲಿಲ್ಲ.

ದೇಶದ ಕಾಯಿದೆ, ಕಾನೂನುಗಳ ಹಾಗೆಯೇ ಸಂವಿಧಾನದ ಹಕ್ಕುಗಳ ರಕ್ಷಕರಾದ ಪ್ರಧಾನ ಮಂತ್ರಿಯವರು ರಾಷ್ಟ್ರಾಧ್ಯಕ್ಷರಂತೆಯೇ ರಾಜ್ಯಪಾಲರ ಕೃತಿಯ ಕುರಿತು ಅಸಮಾಧಾನವನ್ನು ವ್ಯಕ್ತ ಮಾಡುತ್ತಿರುವಾಗ, ಜನತೆಯ ಮನೋಭಾವನೆಗಳಿಗೆ ಮಣಿದು ಬಹುಮತ ಯಾರಿಗಿದೆಂಬುದನ್ನು ನಿರ್ಧರಿಸಲು ಶಾಸನ ಸಭೆಯನ್ನು ಕೂಡಲೇ ಸೇರಿಸಬೇಕೆಂದು ರಾಮಲಾಲ್ ಗೆ ಯಾಕೆ ಆದೇಶ ನೀಡಬಾರದು ? ಅಂಥ ಆದೇಶವನ್ನು ರಾಜ್ಯಪಾಲರು ನಿರಾಕರಿಸಿದರೆ ಅವರನ್ನು ಕಿತ್ತು ಹಾಕಬಾರದೇಕೆ ?

ರಾಮಲಾಲ್ ಇಂದಿರಾ ಗಾಂಧಿಯ ಆದೇಶದಂತೆಯೇ ವರ್ತಿಸಿದ್ದಾರೆ. ಇಲ್ಲವಾದರೆ ಒಂದೇ ಸೆಕೆಂಡಿನಲ್ಲಿ ಅವರು ಹಾರಿ ಹೋಗುತ್ತಿದ್ದರು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದರಿಪಾದ್ ಅವರು ಮದುರೈಯಲ್ಲಿ ಹೇಳಿದಂತೆ ಸರ್ವಾಧಿಕಾರಿ ಶಕ್ತಿಯ ವಿರುದ್ಧ, ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ನಡೆಯುವ ಹೋರಾಟದಲ್ಲಿ ಯಾವುದೇ ರಾಜಕೀಯ ಸೈದ್ಧಾಂತಿಕ ಧೋರಣೆಗಳು ಅಡ್ಡ ಬರಲಾರವು. ಆಂಧ್ರದಲ್ಲಿ ಇಂದಿರಾ ಗಾಂಧಿಯವರು ಪ್ರಜಾಪ್ರಭುತ್ವದ ಹತ್ಯೆ ಮಾಡಿದ್ದರ ಪ್ರತಿಭಟನಾರ್ಥವಾಗಿ ನಡೆದಿರುವ ಜನತಾ ಆಂದೋಲನ ಇ. ಎಂ. ಎಸ್. ಅವರ ನಿಲುವನ್ನು ಪುಷ್ಟೀಕರಿಸುತ್ತದೆ.

ಜನತೆಯ ಆಂದೋಲನ ಮುಂದುವರಿಯಲಿ. ರಾಜ್ಯಪಾಲ ರಾಮಲಾಲ್ ಕಿತ್ತೊಗೆಯಲ್ಪಡಲಿ. ರಾಮರಾವ್ ಸರ್ಕಾರ ಅಸ್ತಿತ್ವಕ್ಕೆ ಬರಲಿ. ಪ್ರಜಾ ಪ್ರಭುತ್ವ ಹಕ್ಕುಗಳ ಹತ್ಯೆ ನಿಲ್ಲಲಿ.

Printed & Published by p. Ramachandra Rao by him on behalf of the Communist party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K V. Temple Street. Sultanpet B 53 Phone : 24514
Editor : P. Ramachandra Rao
Managing Editor : N. K. Upadhyaya